ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	300
ಸದಸ್ಯರ ಹೆಸರು	ಶ್ರೀ ಸುರೇಶ್ ಡಿ.ಎಸ್. (ತರೀಕೆರೆ)
ಉತ್ತರಿಸಬೇಕಾದ ದಿನಾಂಕ	20.02.2023
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ನೂತನ ತಾಲ್ಲೂಕು ಅಜ್ಜಂಪುರದಲ್ಲಿ ಯಾವ ಯಾವ ಸರ್ಕಾರಿ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ; (ವಿವರ ನೀಡುವುದು)	ಅಜ್ಜಂಪುರ ತಾಲ್ಲೂಕಿನಲ್ಲಿ ಕೆಳಕಂಡ ಸರ್ಕಾರಿ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. 1) ತಹಸೀಲ್ದಾರ್ ಕಚೇರಿ 2) ತಾಲ್ಲೂಕು ಪಂಚಾಯತಿ 3) ಪಟ್ಟಣ ಪಂಚಾಯತಿ 4) ಮೆಸ್ಕಾಂ ಕಚೇರಿ 5) ಉಪ ಖಜಾನೆ 6) ಸಮುದಾಯ ಆರೋಗ್ಯ ಕೇಂದ್ರ 7) ಪಶುಸಂಗೋಪನಾ ಕಚೇರಿ
ಆ)	ಅವಶ್ಯಕತೆಯಿರುವ ಕಛೇರಿಗಳು ಕಾರ್ಯನಿರ್ವಹಿಸಲು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ; (ವಿವರ ನೀಡುವುದು)	ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 100 ಡಬ್ಲ್ಯೂಬಿಆರ್ 2017, ದಿನಾಂಕ: 31-10-2017 ರಲ್ಲಿ ಹೊಸದಾಗಿ 'ತಾಲ್ಲೂಕು ಆಡಳಿತ ಸೌಧ' ಕಟ್ಟಡಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಪೀಠೋಪಕರಣ, ಒಳಾಂಗಣ ವಿನ್ಯಾಸ, ವಿದ್ಯುಚ್ಛಕ್ತಿ ಸೌಲಭ್ಯ, ಶೌಚಾಲಯ, ಲಿಫ್ಟ್ ಅಳವಡಿಕೆ ಸೇರಿದಂತೆ ಎಲ್ಲಾ ಪೂರಕ ಸೌಲಭ್ಯಗಳನ್ನು ಒಳಗೊಂಡಂತೆ ರೂ.10.00 ಕೋಟಿಗಳ ಮಿತಿಯಲ್ಲಿ ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ.
ಇ)	ನೂತನ ಕಟ್ಟಡಗಳನ್ನು ಕಟ್ಟಲು ಎಷ್ಟು ಅನುದಾನವನ್ನು ಯಾವ ಯಾವ ಇಲಾಖೆಗೆ ಬಿಡುಗಡೆ ಮಾಡಲಾಗಿದೆ;	ಮುಂದುವರಿದು, ಅಜ್ಜಂಪುರ ತಾಲ್ಲೂಕಿನಲ್ಲಿ 'ತಾಲ್ಲೂಕು ಆಡಳಿತ ಸೌಧ' ನಿರ್ಮಿಸಲು ಗೌರಾಪುರ ಗ್ರಾಮದ ಸರ್ವೆ ನಂ.60 ರಲ್ಲಿ 17.00 ಎಕರ ವಿಸ್ತೀರ್ಣವನ್ನು ಕಾಯ್ದಿರಿಸಲಾಗಿದ್ದು, ಜಿಲ್ಲಾಧಿಕಾರಿಗಳಿಂದ ಅನುದಾನ ಬಿಡುಗಡೆ ಕೋರಿ ಸರ್ಕಾರದಲ್ಲಿ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ. ಆದರೆ 'ತಾಲ್ಲೂಕು ಆಡಳಿತ ಸೌಧ' ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಅಭಿಪ್ರಾಯದ ಹಿನ್ನೆಲೆಯಲ್ಲಿ ಮುಂದಿನ ಆರ್ಥಿಕ ವರ್ಷದವರೆಗೆ ಮುಂದೂಡಲಾಗಿದೆ.
ಈ)	ಉಳಿದ ಕಛೇರಿಗಳನ್ನು ಯಾವ ಕಾಲಮಿತಿಯಲ್ಲಿ ಕಾರ್ಯರೂಪಕ್ಕೆ ತರಲಾಗುವುದು? (ವಿವರ ನೀಡುವುದು)	ಕಂದಾಯ ಇಲಾಖೆ ವತಿಯಿಂದ ತಹಸೀಲ್ದಾರ್ ಕಚೇರಿಗೆ ಹುದ್ದೆಗಳನ್ನು ಸೃಜಿಸಲಾಗಿದೆ. ಇನ್ನುಳಿದ ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿಗಳನ್ನು ಪ್ರಾರಂಭಿಸಲು ಅನುವಾಗುವಂತೆ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹುದ್ದೆಗಳನ್ನು ಸೃಜಿಸಿ, ಹಂತ-ಹಂತವಾಗಿ ಪ್ರಾರಂಭಿಸಲು ಎಲ್ಲಾ ಇಲಾಖೆಗಳ ಅಪರ ಮುಖ್ಯ / ಪ್ರಧಾನ ಕಾರ್ಯದರ್ಶಿಗಳಿಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಮೂಲಕ ಸೂಕ್ತ ನಿರ್ದೇಶನ ನೀಡಲಾಗಿದೆ. ಅದರಂತೆ ಆಯಾ ಇಲಾಖೆ ವತಿಯಿಂದ ಹಂತ-ಹಂತವಾಗಿ ತಾಲ್ಲೂಕು ಮಟ್ಟದ ಕಛೇರಿಗಳನ್ನು ಪ್ರಾರಂಭಿಸಲಾಗುತ್ತದೆ.

ಸಂಖ್ಯೆ: ಕಂಇ 10 ಎಸ್ಎಸ್‌ಸಿ 2023

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**383**
ಉತ್ತರಿಸಬೇಕಾದ ದಿನಾಂಕ	:	20.02.2023
ಉತ್ತರಿಸಬೇಕಾದ ಸಚಿವರು	:	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಮತ್ತು ವಸತಿ ರಹಿತರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿವಿಧ ಯೋಜನೆಗಳಡಿಯಲ್ಲಿ ಒದಗಿಸಿಕೊಡಲಾದ ಮನೆ/ ನಿವೇಶನಗಳೆಷ್ಟು; (ಸಂಖ್ಯೆವಾರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ವಿವರ ಒದಗಿಸುವುದು)	2019-20 ರಿಂದ ಇಲ್ಲಿಯವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ಅರ್ಥಿಕವಾಗಿ ಹಿಂದುಳಿದವರಿಗೆ ಮತ್ತು ವಸತಿರಹಿತರಿಗೆ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ 238224 ಮನೆಗಳನ್ನು ಹಾಗೂ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾಮೀಣ)ರಡಿ 40692 ಮನೆಗಳನ್ನು ಮಂಜೂರು ಮಾಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮುಖ್ಯ ಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆಯಡಿ 8130 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ 2019-20 ರಿಂದ ಇಲ್ಲಿಯವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ಅರ್ಥಿಕವಾಗಿ ಹಿಂದುಳಿದವರಿಗೆ ಮತ್ತು ವಸತಿರಹಿತರಿಗೆ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ 7497 ಮನೆಗಳನ್ನು ಹಾಗೂ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾಮೀಣ)ರಡಿ 21 ಮನೆಗಳನ್ನು ಒಟ್ಟಾರೆಯಾಗಿ 7518 ಮನೆಗಳನ್ನು ಮಂಜೂರು ಮಾಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮುಖ್ಯ ಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆಯಡಿ 528 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರಾದ ಮನೆಗಳು ಹಾಗೂ ಹಂಚಿಕೆ ಮಾಡಲಾದ ನಿವೇಶನಗಳ ತಾಲ್ಲೂಕುವಾರು/ಯೋಜನಾವಾರು ವಿವರವನ್ನು ಅನುಬಂಧ-1 ಮತ್ತು 2 ರಲ್ಲಿ ಒದಗಿಸಲಾಗಿದೆ.
ಆ)	ವಸತಿ ಯೋಜನಾನುಷ್ಠಾನಕ್ಕಾಗಿ 2021-22 ಹಾಗೂ 2022-23 ನೇ ಆರ್ಥಿಕ ವರ್ಷಗಳಲ್ಲಿ ಮೀಸಲಿಟ್ಟ ಅನುದಾನವೆಷ್ಟು; ಈ ಕುರಿತಾದ ಪ್ರಗತಿಯ ವಿವರಗಳು ಯಾವುವು;	2021-22 ಮತ್ತು 2022-23 ನೇ ಸಾಲಿನ (ಜನವರಿ ಅಂತ್ಯಕ್ಕೆ) ವಿವಿಧ ವಸತಿ ಯೋಜನೆಗಳಡಿ ಸರ್ಕಾರದಿಂದ ರೂ.5709.02 ಕೋಟಿಗಳನ್ನು ಮೀಸಲಿಟ್ಟು, ರೂ.4334.02 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನಕ್ಕೆ ಎದುರಾಗಿ ಪ್ರಾಂಭಿಕ ಶಿಲ್ಕು ಸೇರಿದಂತೆ ರೂ.4453.00 ಕೋಟಿಗಳನ್ನು ಖರ್ಚು ಮಾಡಲಾಗಿದೆ. ಯೋಜನಾವಾರು ವಿವರ ಕೆಳಕಂಡಂತಿದೆ. (ರೂ.ಕೋಟಿಗಳಲ್ಲಿ)

ಕ್ರ. ಸಂ.	ಯೋಜನೆಗಳು	ಆಯವ್ಯಯ	ಬಿಡುಗಡೆ	ಖರ್ಚು
1	ಬಸವ ವಸತಿ ಯೋಜನೆ	1586.39	1282.62	1250.33
2	ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ	1795.00	1290.00	1258.83
3	ದೇವರಾಜ್ ಅರಸು ವಸತಿ ಯೋಜನೆ	225.00	225.00	211.34
4	ವಾಜಪೇಯಿ ನಗರ ವಸತಿ	650.00	450.00	408.27

	ಯೋಜನೆ			
5	ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ)	366.23	0.00	182.05
6	ಪ್ರಧಾನ ಮಂತ್ರಿ ಆವಾಸ್ ಯೋಜನೆ - ನಗರ	1086.40	1086.40	1140.55
7	ರಾಜೀವ್ ಆವಾಸ್ ಯೋಜನೆ	0.00	0.00	1.63
	ಒಟ್ಟು	**5709.02**	**4334.02**	**4453.00**

ಇ)	ಸರ್ಕಾರದ ವಸತಿ ಯೋಜನೆಗಳ ಮೂಲಕ ವಸತಿಹೀನರಿಗೆ ಸುಲಭ ಮತ್ತು ಸರಳಸಾಧ್ಯ ಯೋಜನೆಗಳ ಮೂಲಕ ವಸತಿ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಸರ್ಕಾರದ ಮುಂದಿರುವ ಪ್ರಸ್ತಾವನೆಗಳು ಯಾವುವು;	ಸರ್ಕಾರವು ವಸತಿ ರಹಿತರಿಗೆ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. **ರಾಜ್ಯ ಸರ್ಕಾರದ ಯೋಜನೆಗಳು:** • ಬಸವ ವಸತಿ ಯೋಜನೆ • ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ ಮತ್ತು ನಗರ) • ದೇವರಾಜ್ ಅರಸು ವಸತಿ ಯೋಜನೆ (ಗ್ರಾಮೀಣ ಮತ್ತು ನಗರ) • ಕೇಂದ್ರ ಪುರಸ್ಕೃತ ಯೋಜನೆಗಳು: • ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ ಮತ್ತು ನಗರ). **ನಿವೇಶನ ಯೋಜನೆಗಳು** • ಮುಖ್ಯ ಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ • ಮುಖ್ಯ ಮಂತ್ರಿಗಳ ನಗರ ನಿವೇಶನ ಯೋಜನೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬಡವಸತಿ ರಹಿತರಿಗೆ ಸರ್ಕಾರವು ಮುಖ್ಯ ಮಂತ್ರಿಗಳ ಬೆಂಗಳೂರು ಬಹುಮಹಡಿ ವಸತಿ ಯೋಜನೆ & ಪ್ರಧಾನ ಮಂತ್ರಿ ಆವಾಸ್ ಯೋಜನೆ ನಗರ ಯೋಜನೆಗಳಡಿ ವಸತಿ ಸೌಲಭ್ಯಗಳನ್ನು ಒದಗಿಸಲಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈ ಕುಟುಂಬಗಳಿಗೆ ವಸತಿ ಸೌಲಭ್ಯವನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಸರ್ಕಾರವು "ಮುಖ್ಯ ಮಂತ್ರಿಗಳ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಮತ್ತು ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ಜಾರಿಗೊಳಿಸಿದೆ.

ಸಂಖ್ಯೆ :ವಇ 57 ಹೆಚ್‌ಎಎಂ 2023

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ
ಸಚಿವರು

LAQ-383 ಅನುಬಂಧ-1

ದಕ್ಷಿಣ ಕನ್ನಡ ಜಿಲ್ಲೆಗೆ ಗ್ರಾಮೀಣ ಪ್ರದೇಶದಲ್ಲಿ ಕಳೆದ ಮೂರು ವರ್ಷಗಳಿಂದ ಅಂದರೆ 2019-20ರಿಂದ ಇಲ್ಲಿಯವರೆಗೆ ಮಂಜೂರು ಮಾಡಲಾದ ಮನೆಗಳ ವಿವರ

ತಾಲ್ಲೂಕು	ಯೋಜನೆ	ಶ್ರೇಣಿ	ಮಂಜೂರಾದ ಮನೆಗಳು	ಪೂರ್ಣಗೊಂಡ ಮನೆಗಳು	ಒಟ್ಟು ಪ್ರಗತಿಯಲ್ಲಿರುವ ಮನೆಗಳು	ಪ್ರಾರಂಭವಾಗದ ಮನೆಗಳು	ಬ್ಲಾಕ್ ಆದ ಮನೆಗಳು
ntwal	Basava Housing Scheme	2021-2022	1377	183	781	410	3
ntwal	Dr.B.R Ambedkar Nivas Rural	2021-2022	344	35	206	99	4
ntwal Total			**1721**	**218**	**987**	**509**	**7**
lthangadi	PMAY(G)	2019-2020	5	0	3	0	2
lthangadi	Basava Housing Scheme	2021-2022	1359	259	803	295	2
lthangadi	Dr.B.R Ambedkar Nivas Rural	2021-2022	390	39	261	83	7
lthangadi tal			**1754**	**298**	**1067**	**378**	**11**
daba	PMAY(G)	2019-2020	9	4	4	0	1
daba	Basava Housing Scheme	2021-2022	683	104	454	123	2
daba	Dr.B.R Ambedkar Nivas Rural	2021-2022	218	10	155	51	2
daba Total			**910**	**118**	**613**	**174**	**5**
ngaluru	Basava Housing Scheme	2021-2022	403	81	211	110	1
ngaluru	Dr.B.R Ambedkar Nivas Rural	2021-2022	67	3	41	23	0
ngaluru al			**470**	**84**	**252**	**133**	**1**
dabidre	Basava Housing Scheme	2021-2022	227	12	145	69	1
dabidre	Dr.B.R Ambedkar Nivas Rural	2021-2022	70	2	42	26	0
dabidre al			**297**	**14**	**187**	**95**	**1**
ki	PMAY(G)	2019-2020	4	0	0	0	4
ki	Basava Housing Scheme	2021-2022	83	16	39	28	0
ki	Dr.B.R Ambedkar Nivas Rural	2021-2022	23	2	10	10	1
lki Total			**110**	**18**	**49**	**38**	**5**
ur	Devraj Urs Housing Scheme-Rural	2020-2021	1	0	1	0	0
ur	Basava Housing Scheme	2021-2022	645	146	351	148	0
ur	Dr.B.R Ambedkar Nivas Rural	2021-2022	286	38	148	97	3
ur Total			**932**	**184**	**500**	**245**	**3**
ia	PMAY(G)	2019-2020	3	2	0	0	1

ದಕ್ಷಿಣ ಕನ್ನಡ ಜಿಲ್ಲೆಗೆ ಗ್ರಾಮೀಣ ಪ್ರದೇಶದಲ್ಲಿ ಕಳೆದ ಮೂರು ವರ್ಷಗಳಿಂದ ಅಂದರೆ 2019-20ರಿಂದ ಇಲ್ಲಿಯವರೆಗೆ ಮಂಜೂರು ಮಾಡಲಾದ ಮನೆಗಳ ವಿವರ

Sullia	Basava Housing Scheme	2021-2022	708	113	452	143	0
Sullia	Dr.B.R Ambedkar Nivas Rural	2021-2022	267	28	179	59	1
Sullia Total			**978**	**143**	**631**	**202**	**2**
Ullal	Basava Housing Scheme	2021-2022	306	45	176	84	1
Ullal	Dr.B.R Ambedkar Nivas Rural	2021-2022	40	2	21	16	1
Ullal Total			**346**	**47**	**197**	**100**	**2**
Grand Total			**7518**	**1124**	**4483**	**1874**	**37**

LAQ - 383

ಅನುಬಂಧ - 02

ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಹಂಚಿಕೆ ಮಾಡಲಾದ ನಿವೇಶನ ವಿವರ

ಜಿಲ್ಲೆ	ತಾಲ್ಲೂಕು	ಯೋಜನೆ	ವರ್ಷ	ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ
1	2	3	4	5
DakshinaKannada	Bantwal	Rural Housesites	2019-2020	45
DakshinaKannada	Bantwal	Rural Housesites	2021-2022	52
	Bantwal Total			**97**
DakshinaKannada	Belthangadi	Rural Housesites	2020-2021	3
DakshinaKannada	Belthangadi	Rural Housesites	2021-2022	13
DakshinaKannada	Belthangadi	Rural Housesites	2022-2023	72
	Belthangadi Total			**88**
DakshinaKannada	Mangaluru	Rural Housesites	2019-2020	66
DakshinaKannada	Mangaluru	Rural Housesites	2020-2021	64
DakshinaKannada	Mangaluru	Rural Housesites	2021-2022	41
DakshinaKannada	Mangaluru	Rural Housesites	2022-2023	40
	Mangaluru Total			**211**
DakshinaKannada	Puttur	Rural Housesites	2019-2020	24
DakshinaKannada	Puttur	Rural Housesites	2021-2022	28
DakshinaKannada	Puttur	Rural Housesites	2022-2023	9
	Puttur Total			**61**
DakshinaKannada	Sullia	Rural Housesites	2019-2020	41
DakshinaKannada	Sullia	Rural Housesites	2020-2021	13
DakshinaKannada	Sullia	Rural Housesites	2021-2022	17
	Sullia Total			**71**
	Grand Total			**528**

[illegible]	Hariwal	Rural Housing	[illegible]
[illegible]	Hariwal	Rural Housing	[illegible]
	Hariwal Total		
[illegible]	Belthangadi	Rural Housing	[illegible]
[illegible]	Belthangadi	Rural Housing	[illegible]
[illegible]	Belthangadi	Rural Housing	[illegible]
	Belthangadi Total		

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	651
ಸದಸ್ಯರ ಹೆಸರು	ಶ್ರೀ ಬೆಳ್ಳಿಪ್ರಕಾಶ್ (ಕಡೂರು)
ಉತ್ತರಿಸುವ ದಿನಾಂಕ:	20.02.2023
ಉತ್ತರಿಸುವವರು	ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು

	ಪ್ರಶ್ನೆ	ಉತ್ತರ
ಅ)	ಕಾಶಿ ಯಾತ್ರೆಗೆ ಹೋಗುವ ಫಲಾನುಭವಿಗಳಿಗೆ ನಿಗದಿಪಡಿಸಿರುವ ಅರ್ಹತಾ ನಿಯಮಗಳು ಯಾವುವು; ಹೊಸದಾಗಿ ಯಾವುದಾದರೂ ನಿಯಮಗಳನ್ನು ಅಳವಡಿಸಲಾಗಿದೆಯೆ, ಹಾಗಿದ್ದಲ್ಲಿ, ಆ ನಿಯಮಗಳಾವುವು; (ಸಂಪೂರ್ಣ ಮಾಹಿತಿ ನೀಡುವುದು)	2022-23ನೇ ಸಾಲಿನಲ್ಲಿ ಕಾಶಿ ಯಾತ್ರೆಯನ್ನು ಕೈಗೊಂಡ ಕರ್ನಾಟಕದ ಖಾಯಂ ನಿವಾಸಿಗಳಿಗೆ ರೂ.5,000/-ಗಳಂತೆ 30,000 ಯಾತ್ರಾರ್ಥಿಗಳಿಗೆ ಸಹಾಯಧನವನ್ನು ವಿತರಿಸುವ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಕಂಇ 174 ಮುಅಬಿ 2022 ಬೆಂಗಳೂರು ದಿನಾಂಕ: 27.06.2022ರ ಅನ್ವಯ ಜಾರಿಗೆ ತರಲಾಗಿದೆ. ಸದರಿ ಯಾತ್ರಾರ್ಥಿಗಳು ಕರ್ನಾಟಕದ ನಿವಾಸಿಗಳಾಗಿದ್ದು ದಿನಾಂಕ:01.04.2022ರ ನಂತರ ವಾರಣಾಸಿ (ಕಾಶಿ)ಗೆ ಹೋಗುವ ಯಾತ್ರಾರ್ಥಿಗಳು ಈ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹರಿದ್ದು, ಕಾಶಿಗೆ ಪ್ರಯಾಣಿಸಿದ ಯಾತ್ರಾರ್ಥಿಗಳು ಸೇವಾಸಿಂಧು ವೆಬ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅಗತ್ಯ ದಾಖಲೆಗಳೊಂದಿಗೆ ಅರ್ಜಿಸಲ್ಲಿಸಬೇಕಿದ್ದು, ಸದರಿ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ನೇರವಾಗಿ DBT ಮೂಲಕ ಸಹಾಯಧನವನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು, (ನಿಗಧಿಪಡಿಸಿರುವ ಅರ್ಹತಾ ನಿಯಮಗಳಿಗೆ ಸಂಬಂಧಿಸಿದಂತೆ). ಹೊಸದಾಗಿ ಯಾವುದೇ ನಿಯಮಗಳನ್ನು ಅಳವಡಿಸಿಕೊಂಡಿರುವುದಿಲ್ಲ.
ಆ)	ಕಾಶಿ ಯಾತ್ರೆಗೆ ಯಾತ್ರಿಕರನ್ನು ಆಯ್ಕೆ ಮಾಡಲು ಇರುವ ನಿಯಮಗಳು ಮಾನದಂಡಗಳೇನು;	ಕಾಶಿ ಯಾತ್ರೆ ಕೈಗೊಳ್ಳಲು ಮೊದಲು ಬಂದ ಯಾತ್ರಾರ್ಥಿಗಳಿಗೆ ಆಧ್ಯತೆಯನ್ನು ನೀಡಲಾಗುತ್ತಿದೆ. ಯಾತ್ರಾರ್ಥಿಗಳು ಕಾಶಿ ಯಾತ್ರೆಗೆ ಹೋಗಿ ಬಂದ ಬಗ್ಗೆ ಟಿಕೆಟ್, ಚುನಾವಣಾ ಗುರುತಿನ ಚೀಟಿ ಹಾಗೂ ವ್ಯವಸ್ಥಾಪಕರುನ ಕರ್ನಾಟಕ ರಾಜ್ಯ ಛತ್ರ ವಾರಣಾಸಿ ರವರಿಂದ ದೃಢೀಕರಣವನ್ನು ಪಡೆದು ಸೇವಾಸಿಂಧು ವೆಬ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಬೇಕು. ಅದರಂತೆ ಅರ್ಹ ಫಲಾನುಭವಿಗಳಿಗೆ ನೇರವಾಗಿ DBT ಮೂಲಕ ಹಣ ಪಾವತಿಸಲಾಗುವುದು.
ಇ)	ಕಾಶಿ ಯಾತ್ರೆಗೆ ಆಯ್ಕೆಯಾಗುವ ಯಾತ್ರಿಕರಿಗೆ ಒದಗಿಸುವ ಸೌಲಭ್ಯ ಮತ್ತು ಸೌಕರ್ಯಗಳು ಯಾವುವು; (ಮಾಹಿತಿ ನೀಡುವುದು)	• ಕಾಶಿ ಯಾತ್ರೆ ಕೈಗೊಂಡು ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿರುವ ಯಾತ್ರಾರ್ಥಿಗಳಿಗೆ ತಲಾ ರೂ.5,000/-ಗಳಂತೆ ಸಹಾಯಧನವನ್ನು ವಿತರಿಸಲಾಗುತ್ತಿದೆ.

		• ಕರ್ನಾಟಕ ರಾಜ್ಯದಿಂದ ಪುಣ್ಯಕ್ಷೇತ್ರಗಳಾದ ಕಾಶಿ, ಅಯೋಧ್ಯ ಮತ್ತು ಪ್ರಯಾಗ್‌ರಾಜ್ ಕ್ಷೇತ್ರಗಳಿಗೆ ಕಡಿಮೆ ಖರ್ಚಿನಲ್ಲಿ ಪ್ರವಾಸ ಕೈಗೊಳ್ಳಲು ಅನುಕೂಲವಾಗುವಂತೆ "ಕರ್ನಾಟಕ ಭಾರತ್‌ಗೌರವ್ ಕಾಶಿ ದರ್ಶನ" ಯೋಜನೆಯಡಿ ರಿಯಾಯ್ತಿ ದರದಲ್ಲಿ ಪ್ಯಾಕೇಜುಗಳನ್ನು ಭಾರತೀಯ ರೈಲ್ವೇ ಇಲಾಖೆ ಮತ್ತು ಐ.ಆರ್.ಸಿ.ಟಿ.ಸಿ ರವರ ಸಹಯೋಗದೊಂದಿಗೆ ಪ್ಯಾಕೇಜನ್ನು ರೂಪಿಸಿ ವಿಶೇಷ ರೈಲಿನ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. • ಈ ಯೋಜನೆಯಡಿ ಪ್ರಯಾಣಿಸುವ ಯಾತ್ರಾರ್ಥಿಗಳಿಗೆ ತಲಾ ರೂ.20,000/- ಗಳಂತೆ ಪ್ಯಾಕೇಜ್ ರೂಪಿಸಿದ್ದು, ಈ ಮೊತ್ತದಲ್ಲಿ ತಲಾ ರೂ.5,000/- ಗಳನ್ನು ರಾಜ್ಯ ಸರ್ಕಾರದ ವತಿಯಿಂದ ಭರಿಸಿ ಉಳಿದ ಮೊತ್ತ ರೂ.15000/-ಗಳನ್ನು ಯಾತ್ರಾರ್ಥಿಗಳು ಪಾವತಿಸಬೇಕಾಗಿರುತ್ತದೆ. • ಈ ವಿಶೇಷ ರೈಲಿನಲ್ಲಿ ತೆರಳುವ ಯಾತ್ರಾರ್ಥಿಗಳಿಗೆ, ಉಪಹಾರ, ಊಟ, ತಂಗುವಿಕೆ, ಸ್ಥಳೀಯ ಸಾರಿಗೆ ಮತ್ತು ಸ್ಥಳೀಯ ವೀಕ್ಷಣೆ ಒಳಗೊಂಡಿರುತ್ತದೆ.
ಈ)	ಕಾಶಿ ಯಾತ್ರೆ ಆರಂಭವಾದ ದಿನದಿಂದ ಇಲ್ಲಿಯವರೆಗೆ ಒಟ್ಟು ಎಷ್ಟು ಜನರಿಗೆ ಸರ್ಕಾರದಿಂದ ಸೌಲಭ್ಯ ಒದಗಿಸಲಾಗಿದೆ; ಎಷ್ಟು ಅರ್ಜಿಗಳು ಸ್ವೀಕೃತವಾಗಿವೆ, ಬಾಕಿ ಇರುವ ಅರ್ಜಿದಾರರಿಗೆ ಸೌಲಭ್ಯ ಒದಗಿಸಲು ಸರ್ಕಾರ ಸಮಯ ನಿಗದಿಪಡಿಸಿದೆಯೆ; ಹಾಗಿದ್ದಲ್ಲಿ ಯಾವಾಗ ಒದಗಿಸಲಾಗುವುದು; (ಮಾಹಿತಿ ನೀಡುವುದು)	ಕಾಶಿ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ ಸಹಾಯಧನವನ್ನು ವಿತರಿಸಲು ಅರ್ಜಿಗಳನ್ನು ದಿನಾಂಕ:14.07.2022 ರಿಂದ ಆಹ್ವಾನಿಸಲಾಗಿದ್ದು ಸ್ವೀಕೃತವಾದ ಅರ್ಜಿಗಳು ಬಾಕಿ ಇರುವ ಅರ್ಜಿಗಳ ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ. ಅಗತ್ಯ ದಾಖಲೆಗಳನ್ನು ಸಲ್ಲಿಸದೇ ಇರುವ ಯಾತ್ರಾರ್ಥಿಗಳಿಗೆ ಸೂಕ್ತ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಸೂಕ್ತ ದಾಖಲೆಗಳನ್ನು ಸಲ್ಲಿಸಿದ ಕೂಡಲೇ ಬಾಕಿ ಇರುವ ಯಾತ್ರಾರ್ಥಿಗಳಿಗೆ ಸಹಾಯಧನವನ್ನು ನಿಯಮಾನುಸಾರ ಪರಿಶೀಲಿಸಿ ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ನಿಗಧಿಪಡಿಸುವ ಕಾಲಮಿತಿಯನ್ವಯ ಖಜಾನೆ-2ರಡಿ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.
ಉ)	ಕಾಶಿ ಪವಿತ್ರ ಯಾತ್ರೆಗೆ ಹೋಗುವ ಯಾತ್ರಿಕರ ಬೇಡಿಕೆಗೆ ಅನುಗುಣವಾಗಿ ಇನ್ನಷ್ಟು ಯಾತ್ರಿಕರ ಸಂಖ್ಯೆಯನ್ನು ಹೆಚ್ಚಿಸುವ ಮತ್ತು ಸೌಲಭ್ಯಗಳನ್ನು ಇನ್ನೂ ಹೆಚ್ಚಿಗೆ ಒದಗಿಸುವ ಕುರಿತು ಸರ್ಕಾರದ ನಿಲುವೇನು?	ಕಾಶಿ ಪವಿತ್ರ ಯಾತ್ರೆಗೆ ಹೋಗುವ ಯಾತ್ರಿಕರ ಬೇಡಿಕೆಗೆ ಅನುಗುಣವಾಗಿ ಇನ್ನಷ್ಟು ಯಾತ್ರಿಕರ ಸಂಖ್ಯೆಯನ್ನು ಹೆಚ್ಚಿಸುವ ಮತ್ತು ಸೌಲಭ್ಯಗಳನ್ನು ಇನ್ನೂ ಹೆಚ್ಚಿಗೆ ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

(ಸಂಖ್ಯೆ: ಕಂಇ 40 ಮುಸಪು 2023)

(ಶಶಿಕಲಾ. ಅ. ಜೊಲ್ಲೆ)
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು.

<u>ಅನುಬಂಧ</u>

ಕಾಶಿ ಯಾತ್ರೆಗೆ ಸಂಬಂಧಿಸಿದಂತೆ ಸರ್ಕಾರದ ಸಹಾಯಧನಕ್ಕಾಗಿ ದಿನಾಂಕ:14.07.2022 ರಿಂದ ದಿನಾಂಕ:14.02.2023ರವರೆಗೆ ಸ್ವೀಕೃತಗೊಂಡಿರುವ ಅರ್ಜಿಗಳ ವಿವರ:

ಒಟ್ಟು ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ	ಪರಿಶೀಲಿಸಲಾದ ಅರ್ಜಿಗಳ ಸಂಖ್ಯೆ	ಅಂಗೀಕರಿಸಲಾಗಿರುವ ಅರ್ಜಿಗಳ ಸಂಖ್ಯೆ	ಸ್ಪಷ್ಟೀಕರಣ ಕೋರಲಾಗಿರುವ ಅರ್ಜಿಗಳ ಸಂಖ್ಯೆ	ತಲಾ ರೂ.5,000/- ಗಳಂತೆ ಸಹಾಯಧನವನ್ನು ವಿತರಿಸಲಾಗಿರುವ ಅರ್ಜಿಗಳ ಸಂಖ್ಯೆ	ಯಾತ್ರಾರ್ಥಿಗಳು ದೃಢೀಕರಣ ಪಡೆಯಲು ಬಾಕಿ ಇರುವ ಅರ್ಜಿಗಳ ಸಂಖ್ಯೆ(ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಛತ್ರ ವಾರಣಾಸಿ ರವರ ಲಾಗಿನ್‌ನಲ್ಲಿ)	ಅಂಗೀಕರಿಸಿ ಸಹಾಯಧನ ವಿತರಿಸಲು ಡಿ.ಬಿ.ಟಿ ನಲ್ಲಿ ಬಾಕಿ ಇರುವ ಅರ್ಜಿಗಳ ಸಂಖ್ಯೆ	ಪರಿಶೀಲಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ
35366	32942	11468	15924	8887	4057	2581	1336

Click here for Annexures

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	652
ಸದಸ್ಯರ ಹೆಸರು	ಶ್ರೀ ಬೆಳ್ಳಿಪ್ರಕಾಶ್
ಉತ್ತರಿಸುವ ದಿನಾಂಕ	20/02/2023
ಉತ್ತರಿಸುವವರು	ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಮುಜರಾಯಿ ಇಲಾಖೆಯಡಿಯಲ್ಲಿ ಬರುವ ದೇವಾಲಯಗಳು ಹಾಗೂ ಇತರೆ ಸಂಘ ಸಂಸ್ಥೆಗಳು ತನ್ನದೇ ಆದ ಜಮೀನುಗಳನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಆ ದೇವಾಲಯಗಳು ಹಾಗೂ ಇತರೆ ಸಂಘ ಸಂಸ್ಥೆಗಳು ಹೊಂದಿರುವ ಜಮೀನುಗಳೆಷ್ಟು;(ಗ್ರಾಮ, ಸರ್ವೆ ನಂ ಹಾಗೂ ವಿಸ್ತೀರ್ಣಗೊಂದಿಗೆ ತಾಲ್ಲೂಕುವಾರು, ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು.	ಬಂದಿದೆ ಪ್ರಸ್ತುತ 205 "ಎ" ಪ್ರವರ್ಗದ ದೇವಾಲಯಗಳು ಹಾಗೂ 193 "ಬಿ" ಪ್ರವರ್ಗದ ದೇವಾಲಯಗಳು ಹೊಂದಿರುವ ಆಸ್ತಿಗಳನ್ನು ಪಟ್ಟಿ ಮಾಡಲಾಗಿದೆ. ಜಿಲ್ಲಾವಾರು "ಎ" ಮತ್ತು "ಬಿ" ಪ್ರವರ್ಗದ ಅಧಿಸೂಚಿತ ದೇವಾಲಯಗಳು/ ಮುಜರಾಯಿ ದೇವಾಲಯಗಳು ಹೊಂದಿರುವ ಆಸ್ತಿಗಳನ್ನು ಜಿಲ್ಲಾಧಿಕಾರಿಗಳಿಂದ ಪಡೆದು ಕ್ರೋಢೀಕರಿಸಿ ಲಗತ್ತಿಸಿದೆ.**(ಅನುಬಂಧ-01)** "ಸಿ" ಪ್ರವರ್ಗದ ದೇವಾಲಯಗಳು ಹೊಂದಿರುವ ಆಸ್ತಿಯ ಬಾಬ್ತು, ಇನಾಂ ಜಮೀನುಗಳ ಪಹಣಿಗಳಲ್ಲಿ ಮಂಜೂರಾತಿಗಳನ್ನು ಇಂಡೀಕರಿಸಿ, ದೇವಾಲಯಕ್ಕೆ ಉಳಿದಿರುವ ಜಮೀನುಗಳ ಬಾಬ್ತು ಜಿಲ್ಲಾಧಿಕಾರಿಗಳು ಅಧಿಸೂಚನೆ ಹೊರಡಿಸಿದ ನಂತರ ಸ್ಪಷ್ಟ ಮಾಹಿತಿ ಲಭ್ಯವಾಗಲಿದ್ದು, ಪ್ರಸ್ತುತ ಜಿಲ್ಲಾಧಿಕಾರಿಗಳು ಕಳುಹಿಸಿರುವ ದೇವಾಲಯವಾರು ಮಾಹಿತಿಯನ್ನು **ಅನುಬಂಧ-02** (ಸಿ.ಡಿ) ರಲ್ಲಿ ಸಲ್ಲಿಸಿದೆ.
ಆ.	ಈ ಜಮೀನುಗಳು ಒತ್ತುವರಿಯಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅವುಗಳನ್ನು ಸರ್ವೆ ಮಾಡಿಸಿ, ಹದ್ದುಬಸ್ತು ಗುರುತಿಸಿ ದೇವಾಲಯಗಳ, ಸಂಘ ಸಂಸ್ಥೆಗಳ ಆಯಾ ಆಡಳಿತ ಮಂಡಳಿಗಳಿಗೆ ಅಥವಾ ಧಾರ್ಮಿಕ ದತ್ತಿ ಇಲಾಖೆಗೆ ನೀಡುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇಲ್ಲದಿದ್ದಲ್ಲಿ ಕಾರಣಗಳೇನು; (ಮಾಹಿತಿ ನೀಡುವುದು)	ಬಂದಿದೆ. ಪ್ರಶ್ನಿತ ಜಮೀನುಗಳ ಪೈಕಿ ಒತ್ತುವರಿ ಆಗಿರುವ ಜಮೀನು/ಸ್ಥಿರಾಸ್ತಿಗಳ ತೆರವು ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ. ರಾಜ್ಯದಲ್ಲಿ ಒತ್ತುವರಿಯಾದ ಅಧಿಸೂಚಿತ ದೇವಾಲಯಗಳ ಆಸ್ತಿಗಳ ಬಗ್ಗೆ ದಿನಾಂಕ: 30-11-2022 ರವರೆಗೆ ಸ್ವೀಕೃತವಾದ ವರದಿಗಳಂತೆ 5782 ದೇವಾಲಯಗಳ ಬಾಬ್ತು ಅಳತೆ ಮಾಡಿ ಒತ್ತುವರಿ ಗುರುತಿಸಿದ್ದು, ಪ್ರವರ್ಗವಾರು ದೇವಾಲಯಗಳ ಜಿಲ್ಲಾವಾರು ವಿವರವನ್ನು **ಅನುಬಂಧ-3** ರಲ್ಲಿ ಒದಗಿಸಿದೆ. ಹಾಗೂ ಗುರುತಿಸಿರುವ ಒತ್ತುವರಿಯನ್ನು ತೆರವುಗೊಳಿಸಲು ಸಂಬಂಧಪಟ್ಟ ಕಂದಾಯ ಇಲಾಖಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

		ಧಾರ್ಮಿಕ ದತ್ತಿ ಇಲಾಖೆಯಲ್ಲಿ ನೌಕರರು/ ಸಿಬ್ಬಂದಿಗಳ ತೀವ್ರ ಕೊರತೆ ಇರುವುದರಿಂದ ಮುಜರಾಯಿ ಇಲಾಖೆಯ ಜಮೀನುಗಳ ಒತ್ತುವರಿಯನ್ನು ಖುಲ್ಲಾಪಡಿಸಲು ಕಂದಾಯ ಇಲಾಖೆಯ ಅಧಿಕಾರಿಗಳನ್ನು ಅವಲಂಬಿಸಿದ್ದು, ಭೂದಾಖಲೆಗಳ ಉಪನಿರ್ದೇಶಕರು ಗಳಿಂದ ಸ್ವೀಕೃತವಾದ ಒತ್ತುವರಿ ಮಾಹಿತಿಯನ್ನು ತಹಶೀಲ್ದಾರ್ ರವರಿಗೆ ಪತ್ರ ವ್ಯವಹಾರ ಮೂಲಕ ಖುಲ್ಲಾಪಡಿಸಲು ಕೋರಲಾಗಿರುತ್ತದೆ. ವರದಿ ನಿರೀಕ್ಷಿಸಲಾಗಿದ್ದು, ವರದಿ ಸ್ವೀಕೃತವಾದ ನಂತರವಷ್ಟೆ ಇಲ್ಲಿಯವರೆಗೆ ಎಷ್ಟು ಒತ್ತುವರಿ ತೆರವುಗೊಳಿಸಲಾಗಿದೆ ಎಂಬ ಬಗ್ಗೆ ನಿಖರ ಮಾಹಿತಿ ಲಭ್ಯವಾಗುತ್ತದೆ.
ಇ.	ಭೂಮಾಪನ ಇಲಾಖೆಯಿಂದ ದೇವಾಲಯಗಳಿಗೆ ಸಂಬಂಧಿಸಿದ ಜಮೀನುಗಳ ಸರ್ವೆ ಕಾರ್ಯ ವಿಳಂಬವಾಗುತ್ತಿರುವುದರಿಂದ, ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಜಮೀನುಗಳ ಸರ್ವೆ ಕಾರ್ಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸರ್ವೆ ಸಿಬ್ಬಂದಿಯನ್ನು ಒದಗಿಸುವ ಕುರಿತು ಸರ್ಕಾರ ಗಂಭೀರವಾಗಿ ಕ್ರಮವಹಿಸುವುದೇ; ಹಾಗಿದ್ದಲ್ಲಿ, ಯಾವಾಗ ಕ್ರಮ ವಹಿಸಲಾಗುವುದು; ವಿಳಂಬವಾಗಲು ಕಾರಣಗಳೇನು; (ಮಾಹಿತಿ ನೀಡುವುದು)	ಭೂಮಾಪನ ಇಲಾಖೆಯಿಂದ ಸರ್ಕಾರಿ ಭೂಮಾಪರಿಂದ ಸರ್ವೆ ಕಾರ್ಯ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಪರವಾನಗಿ ಭೂಮಾಪಕರ ಸೇವೆಯನ್ನು ಬಳಸಿಕೊಂಡು ಅಧಿಸೂಚಿತ ಮುಜರಾಯಿ ಸಂಸ್ಥೆಗಳ ಜಮೀನುಗಳನ್ನು ಅಳತೆ ಮಾಡುವ ಬಗ್ಗೆ ಚಿಂತನ ನಡೆಸಲಾಗುತ್ತಿದೆ.
ಈ.	ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಜಮೀನುಗಳ ಸರ್ವೆ ಕಾರ್ಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಭೂಮಾಪನ ಶಾಖೆಯನ್ನು ಜಿಲ್ಲಾ ಅಥವಾ ತಾಲ್ಲೂಕು ಹಂತದಲ್ಲಿ ತೆರೆಯುವ ಕುರಿತು ಸರ್ಕಾರ ಚಿಂತನ ನಡೆಸಿದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳುವುದೇ; ಇಲ್ಲದಿದ್ದಲ್ಲಿ ಕಾರಣಗಳೇನು?	ಇಲ್ಲ. ಧಾರ್ಮಿಕ ದತ್ತಿ ಇಲಾಖೆಯ ಅಧಿಸೂಚಿತ ಸಂಸ್ಥೆಗಳ ಜಮೀನುಗಳ ಸಂರಕ್ಷಣೆಗೆ ಮೊದಲ ಹಂತದಲ್ಲಿ ಎಲ್ಲಾ 'ಎ' ಮತ್ತು 'ಬಿ' ಶ್ರೇಣಿಯ ಹಾಗೂ ಮಹಾನಗರ ಪಾಲಿಕೆ/ನಗರ ಸಭೆ/ಪುರಸಭೆ/ಪಟ್ಟಣ ಪಂಚಾಯಿತಿ ಪ್ರದೇಶದಲ್ಲಿರುವ 'ಸಿ' ಶ್ರೇಣಿಯ ಧಾರ್ಮಿಕ ದತ್ತಿ ಆಸ್ತಿಗಳ ಬಾಬ್ತು ಹಕ್ಕು ದಾಖಲೆಗಳ ಇಂದೀಕರಣ, ಅಳತೆಕಾರ್ಯ ಒತ್ತುವರಿ ತೆರವುಗೊಳಿಸುವಿಕೆ, ಗುತ್ತಿಗೆ ಅವಧಿ ಮುಗಿದ ಆಸ್ತಿಗಳ ತೆರವುಗೊಳಿಸುವಿಕೆ ಇತ್ಯಾದಿ ಕೆಲಸಗಳನ್ನು ತ್ವರಿತಗತಿಯಲ್ಲಿ ನಿರ್ವಹಿಸಿ ಧಾರ್ಮಿಕ ದತ್ತಿ ಇಲಾಖೆಯ ಇತರೆ ಗ್ರೂಪ್ 'ಸಿ' ಶ್ರೇಣಿಯ ದೇವಾಲಯಗಳ ಹಕ್ಕು ದಾಖಲೆಗಳ ಇಂದೀಕರಣ, ಅಳತೆಕಾರ್ಯ ಒತ್ತುವರಿ ತೆರವುಗೊಳಿಸುವಿಕೆ ಕಾರ್ಯರೂಪಕ್ಕೆ ತರಲು ಕಂಇ 49 ಮುಇಬಿ 2021, ದಿನಾಂಕ:05.09.2022ರ ಆದೇಶದಲ್ಲಿ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ.

ಸಂಖ್ಯೆ: ಕಂಇ 46 ಮುಸಪು 2023

(ಶಶಿಕಲಾ. ಅ.ಜೊಲ್ಲೆ)
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು

"ಎ" ಪ್ರವರ್ಗದ ಜಿಲ್ಲಾವಾರು ಮಾಹಿತಿ
ಅನುಬಂಧ- 01

ಕ್ರಮ ಸಂಖ್ಯೆ	ಜಿಲ್ಲೆ	ಒಟ್ಟು ದೇವಾಲಯಗಳ ಸಂಖ್ಯೆ	ಅಳತೆಯಾದ ಎ ದೇವಾಲಯಗಳ ಸಂಖ್ಯೆ	ಬಾಕಿ ಇರುವ ಎ ದೇವಾಲಯಗಳ ಸಂಖ್ಯೆ	ಒತ್ತುವರಿ ಯಾದ ದೇವಾಲಯದ ಸಂಖ್ಯೆ	ಒತ್ತುವರಿ ವಿಸ್ತೀರ್ಣ	
						ಎಕರೆ	ಗುಂಟೆ/ಸೆಂಟ್ಸ್
1	Bagalkote	0	0	0	0	0	0
2	Bengaluru Urban	21	13	8	2	0	5
3	Bengaluru Rural	3	2	1	1	0	5
4	Belagavi	5	5	0	0	0	0
5	Bellary	4	1	3	0	0	0
6	Bidar	7	3	4	0	0	0
7	Chamarajnagar	2	1	1	0	0	0
8	Chikkaballapur	3	3	0	0	0	0
9	Chikkamangaluru	3	2	1	0	0	0
10	chitradurga	4	3	1	0	0	0
11	Dakshina Kannada	43	15	28	5	14	9.7
12	Davanagere	2	0	2	0	0	0
13	Dharwad	0	0	0	0	0	0
14	Gadag	0	0	0	0	0	0
15	kalburgi	4	4	0	0	0	0
16	Hassan	5	1	4	0	0	0
17	Haveri	1	0	1	0	0	0
18	Kodagu	3	3	0	3	287	27
19	Kolar	6	6	0	0	0	0
20	Koppala	3	0	3	0	0	0
21	Mandhya	9	4	5	1	0	7
22	Mysuru	6	3	3	2	7	39
23	Raichur	4	2	2	1	0	30
24	Ramanagar	7	3	4	3	13	21
25	Shivamoga	4	4	0	0	0	0
26	Tumkur	10	4	6	2	1	1.75
27	Udupi	26	6	20	2	1	2.5
28	Uttara Kannada	10	9	1	0	0	0
29	Vijayanagar	8	4	4	1	0	45
30	Vijayapura	0	0	0	0	0	0
31	Yadgiri	2	1	1	0	0	0
		205	102	103	23		

ಷರಾ: ಆಯಾ ಪ್ರದೇಶಗಳಲ್ಲಿ ಬಳಸುವ ಅಳತೆಮಾಪಕ(units of measurement)ಕ್ಕನುಸಾರವಾಗಿ ಎಕರ/ಗುಂಟೆ ಅಥವಾ ಎಕರೆ/ಸೆಂಟ್ಸ್ ಗಳಲ್ಲಿ ಒತ್ತುವರಿ ವಿಸ್ತೀರ್ಣವನ್ನು ದಾಖಲಿಸಿದೆ.

"ಬಿ" ಪ್ರವರ್ಗದ ಜಿಲ್ಲಾವಾರು ಮಾಹಿತಿ
ಅನುಬಂಧ- 04

ಕ್ರಮ ಸಂಖ್ಯೆ	ಜಿಲ್ಲೆ	ಒಟ್ಟು ದೇವಾಲಯಗಳ ಸಂಖ್ಯೆ	ಅಳತೆಯಾದ ಬಿ ದೇವಾಲಯಗಳ ಸಂಖ್ಯೆ	ಬಾಕಿ ಇರುವ ಬಿ ದೇವಾಲಯಗಳ ಸಂಖ್ಯೆ	ಒತ್ತುವರಿಯಾದ ದೇವಾಲಯದ ಸಂಖ್ಯೆ	ಒತ್ತುವರಿ ವಿಸ್ತೀರ್ಣ	
						ಎಕರೆ	ಗುಂಟೆ/ಸೆಂಟ್ಸ್
1	Bagalkote	2	0	2	0	0	0
2	Bengaluru Urban	16	6	10	2	31	37
3	Bengaluru Rural	5	3	2	0	0	0
4	Belagavi	6	5	1	0	0	0
5	Bellary	7	4	3	0	0	0
6	Bidar	3	0	3	0	0	0
7	Chamarajnagar	1	0	1	0	0	0
8	Chikkaballapur	4	3	1	2	23	32
9	Chikkamangaluru	10	7	3	0	0	0
10	chitradurga	4	4	0	0	0	0
11	Dakshina Kannada	37	24	13	4	9	38
12	Davanagere	8	1	7	0	0	0
13	Dharwad	0	0	0	0	0	0
14	Gadag	0	0	0	0	0	0
15	kalburgi	2	0	2	0	0	0
16	Hassan	7	4	3	1	2	6
17	Haveri	11	0	11	0	0	0
18	Kodagu	0	0	0	0	0	0
19	Kolar	7	7	0	0	0	0
20	Koppala	1	0	1	0	0	0
21	Mandhya	13	0	13	0	0	0
22	Mysuru	4	0	4	0	0	0
23	Raichur	1	1	0	0	0	0
24	Ramanagar	5	0	5	0	0	0
25	Shivamoga	1	1	0	0	0	0
26	Tumkur	6	2	4	0	0	0
27	Udupi	17	0	17	0	0	0
28	Uttara Kannada	6	6	0	0	0	0
29	Vijayanagar	5	3	2	0	0	0
30	Vijayapura	1	0	1	0	0	0
31	Yadgiri	3	2	1	0	0	0
		193	83	110	9		

ಷರಾ: ಆಯಾ ಪ್ರದೇಶಗಳಲ್ಲಿ ಬಳಸುವ ಅಳತೆಮಾಪಕ(units of measurement)ಕ್ಕನುಸಾರವಾಗಿ ಎಕರ/ಗುಂಟೆ ಅಥವಾ ಎಕರೆ/ಸೆಂಟ್ಸ್ ಗಳಲ್ಲಿ ಒತ್ತುವರಿ ವಿಸ್ತೀರ್ಣವನ್ನು ದಾಖಲಿಸಿದೆ.

"ಸಿ" ಪ್ರವರ್ಗದ ಜಿಲ್ಲಾವಾರು ಮಾಹಿತಿ
ಅನುಬಂಧ-03

ಕ್ರಮ ಸಂಖ್ಯೆ	ಜಿಲ್ಲೆ	ಅಳತೆಯಾದ ಸಿ ದೇವಾಲಯಗಳ ಸಂಖ್ಯೆ	ಒತ್ತುವರಿಯಾದ ದೇವಾಲಯದ ಸಂಖ್ಯೆ	ಒತ್ತುವರಿ ವಿಸ್ತೀರ್ಣ	
				ಎಕರೆ	ಗುಂಟೆ/ಸೆಂಟ್ಸ್
1	Bagalkote	909	0	0	0
2	Bengaluru Urban	30	0	0	0
3	Bengaluru Rural	1088	0	0	0
4	Belagavi	16	0	0	0
5	Bellary	3	0	0	0
6	Bidar	186	0	0	0
7	Chamarajnagar	83	16	75	3.5
8	Chikkaballapur	94	7	5	26
9	Chikkamangaluru	355	0	0	0
10	chitradurga	76	0	0	0
11	Dakshina Kannada	112	2	0	11
12	Davanagere	355	6	5	14
13	Dharwad	439	0	0	0
14	Gadag	0	0	0	0
15	kalburgi	0	0	0	0
16	Hassan	141	45	77	70
17	Haveri	0	0	0	0
18	Kodagu	0	0	0	0
19	Kolar	134	29	81	34
20	Koppala	0	0	0	0
21	Mandhya	0	0	0	0
22	Mysuru	596	0	0	0
23	Raichur	0	0	0	0
24	Ramanagar	0	0	0	0
25	Shivamoga	137	1	0	37.75
26	Tumkur	246	0	0	0
27	Udupi	0	0	0	0
28	Uttara Kannada	352	1	0	3.2
29	Vijayanagar	243	1	0	40
30	Vijayapura	0	0	0	0
31	Yadgiri	2	0	0	0
		5597	108		

ಷರಾ: ಆಯಾ ಪ್ರದೇಶಗಳಲ್ಲಿ ಬಳಸುವ ಅಳತೆಮಾಪಕ(units of measurement)ಕ್ಕನುಸಾರವಾಗಿ ಎಕರೆ/ಗುಂಟೆ ಅಥವಾ ಎಕರೆ/ಸೆಂಟ್ಸ್ ಗಳಲ್ಲಿ ಒತ್ತುವರಿ ವಿಸ್ತೀರ್ಣವನ್ನು ದಾಖಲಿಸಿದೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಬೆಳ್ಳಿಪ್ರಕಾಶ್ (ಕಡೂರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**653**
ಉತ್ತರಿಸಬೇಕಾದ ದಿನಾಂಕ	:	20.02.2023
ಉತ್ತರಿಸಬೇಕಾದ ಸಚಿವರು	:	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಾದ್ಯಂತ ಸರ್ಕಾರಿ ಹಾಗೂ ಸ್ಥಳೀಯ ಸಂಸ್ಥೆಗಳ ಮಾಲೀಕತ್ವದಲ್ಲಿರುವ ಘೋಷಿತ ಕೊಳಚೆ ಪ್ರದೇಶಗಳಲ್ಲಿರುವ ನಿವಾಸಿಗಳಿಗೆ ವಿತರಿಸಿರುವ ಹಕ್ಕುಪತ್ರಗಳನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ನೋಂದಣಿ ಮಾಡಿಕೊಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ವಿಳಂಬವನ್ನು ತಪ್ಪಿಸಲು ಮಂಡಳಿಯಿಂದ ತೆಗೆದುಕೊಂಡಿರುವ ಕ್ರಮಗಳೇನು;	ಬಂದಿದೆ. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ರಾಜಾದ್ಯಂತ ಸರ್ಕಾರಿ ಹಾಗೂ ಸ್ಥಳೀಯ ಸಂಸ್ಥೆಗಳ ಮಾಲೀಕತ್ವದಲ್ಲಿರುವ ಘೋಷಿತ ಕೊಳಚೆ ಪ್ರದೇಶದಲ್ಲಿರುವ ನಿವಾಸಿಗಳಿಗೆ ವಿತರಿಸಿರುವ ಹಕ್ಕುಪತ್ರಗಳ ಕ್ರಮಬದ್ಧಗೊಳಿಸುವಿಕೆ ದರಕ್ಕೆ ರಿಯಾಯಿತಿ ನೀಡಲಾಗಿದೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ವಿಳಂಬವನ್ನು ತಪ್ಪಿಸಲು ಹಕ್ಕುಪತ್ರ ವಿತರಿಸುವ ಅರ್ಹ ಫಲಾನುಭವಿಗಳಿಗೆ ಆಯಾ ಪ್ರದೇಶಗಳ ವ್ಯಾಪ್ತಿಗೆ ಬರುವ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಹಕ್ಕುಪತ್ರ ನೋಂದಣಿ ಮಾಡಲು ಆಯಾ ಕಾರ್ಯ ವ್ಯಾಪ್ತಿಗೆ ಬರುವ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶ ಹೊರಡಿಸಲಾಗಿದೆ.
ಆ)	ಕಳೆದ ಮೂರು ವರ್ಷಗಳಲ್ಲಿ ಕಡೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಕೊಳಗೇರಿ ನಿವಾಸಿಗಳಿಗೆ ಎಷ್ಟು ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿದೆ; ವಿತರಣೆ ಮಾಡಿದ ಹಕ್ಕುಪತ್ರಗಳಲ್ಲಿ ಎಷ್ಟು ನೋಂದಣಿಯಾಗಿದೆ; ಕೊಳಗೇರಿವಾರು ಹಕ್ಕುಪತ್ರ ಪಡೆದಿರುವ ಮತ್ತು ನೋಂದಣಿಯಾದ ಹಾಗೂ ನೋಂದಣಿ ಮಾಡಿಸಲು ಬಾಕಿ ಇರುವ ನಿವಾಸಿಗಳೆಷ್ಟು; (ಸಂಪೂರ್ಣ ವಿವರ ನೀಡುವುದು)	ಕಡೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 18 ಘೋಷಿತ ಕೊಳಚೆ ಪ್ರದೇಶಗಳಿರುತ್ತವೆ. ಈ ಪೈಕಿ 13 ಕೊಳಚೆ ಪ್ರದೇಶಗಳು ಸ್ಥಳೀಯ ಸಂಸ್ಥೆಯ ಮಾಲೀಕತ್ವದಲ್ಲಿ ಇದ್ದು, 5 ಕೊಳಚೆ ಪ್ರದೇಶಗಳು ಖಾಸಗಿ ಮಾಲೀಕತ್ವದಲ್ಲಿ ಇರುತ್ತವೆ. ಸ್ಥಳೀಯ ಸಂಸ್ಥೆಯ ಮಾಲೀಕತ್ವದಲ್ಲಿ ಬರುವ 13 ಕೊಳಚೆ ಪ್ರದೇಶಗಳಿಗೆ ಪುರಸಭೆಯ ವತಿಯಿಂದ ಹಕ್ಕುಪತ್ರ ನೀಡಿ, ಖಾತೆ ಮಾಡಲಾಗಿದೆ. ಕೋಟೆ ಅಗಳು ಕೊಳಚೆ ಪ್ರದೇಶಕ್ಕೆ ಮಂಡಳಿ ವತಿಯಿಂದ ಹಕ್ಕುಪತ್ರ ವಿತರಿಸಲು ಪುರಸಭೆಯಿಂದ ಜಮೀನು ಮಂಡಳಿಗೆ ಹಸ್ತಾಂತರಿಸಲಾಗಿದೆ. ಸದರಿ ಕೋಟೆ ಅಗಳು ಕೊಳಚೆ ಪ್ರದೇಶದಲ್ಲಿ 116 ಕುಟುಂಬಗಳು ವಾಸವಾಗಿದ್ದು, 84 ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಲಾಗಿದೆ. ಜಮೀನು ಮಾಲೀಕರು ಈ ಬಗ್ಗೆ ಮಾನ್ಯ ಲೋಕಾಯುಕ್ತ ಮತ್ತು ಮಾನ್ಯ ಸಿವಿಲ್/ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ.
ಇ)	ನಿಗದಿತ ಅವಧಿಯೊಳಗೆ ಹಕ್ಕುಪತ್ರ ಪಡೆದಿರುವ ಕಡೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕೊಳಗೇರಿ ನಿವಾಸಿಗಳಿಗೆ ನಿಗದಿತ ಸಮಯದೊಳಗೆ ನೋಂದಣಿ ಮಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)	ಮಂಡಳಿ ವತಿಯಿಂದ ಕೋಟೆ ಅಗಳು ಕೊಳಚೆ ಪ್ರದೇಶದ 84 ಕುಟುಂಬಗಳಿಗೆ ನೀಡಲಾದ ಹಕ್ಕುಪತ್ರವನ್ನು ನೋಂದಣಿ ಮಾಡಲಾಗಿದ್ದು, ಉಳಿದ ಕುಟುಂಬಗಳಿಗೆ ಹಕ್ಕುಪತ್ರ ನೀಡಲು ಮಾನ್ಯ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ, ನ್ಯಾಯಾಲಯದ ತೀರ್ಪಿನಂತೆ ಕ್ರಮ ವಹಿಸಲಾಗುವುದು.

ಈ)	ಹಕ್ಕುಪತ್ರ ಪಡೆಯದೇ ಬಾಕಿ ಇರುವ ಕೊಳಗೇರಿ ನಿವಾಸಿಗಳಿಗೆ ಹಕ್ಕುಪತ್ರ ವಿತರಣೆ ಮಾಡುವ ಕುರಿತು ಸರ್ಕಾರದ ನಿಲುವೇನು; ಬಾಕಿ ಇರಲು ಕಾರಣಗಳೇನು ? (ಮಾಹಿತಿ ನೀಡುವುದು)	ಹಕ್ಕುಪತ್ರ ಪಡೆಯದೇ ಬಾಕಿ ಇರುವ 32 ಕುಟುಂಬಗಳಿಗೆ ಹಕ್ಕು ಪತ್ರ ವಿತರಣೆ ಮಾಡುವ ಬಗ್ಗೆ ಮಾನ್ಯ ನ್ಯಾಯಾಲಯದ ತೀರ್ಪು ಬಂದ ಮೇಲೆ ಕ್ರಮ ವಹಿಸಲಾಗುವುದು.

ಸಂಖ್ಯೆ :ವಇ 45 ಎಸ್‌ಬಿಎಂ 2023

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ
ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	654
ಸದಸ್ಯರ ಹೆಸರು	ಶ್ರೀ ಬೆಳ್ಳಿಪ್ರಕಾಶ್ (ಕಡೂರು)
ವಿಷಯ	ಪರಿಹಾರ ಧನ ವಿತರಣೆ
ಉತ್ತರಿಸಬೇಕಾದ ದಿನಾಂಕ	20.02.2023
ಉತ್ತರಿಸುವ ಸಚಿವರು	ಕಂದಾಯ ಸಚಿವರು
ಪ್ರಶ್ನೆ	ಉತ್ತರ

ಅ) ರಾಜ್ಯದಲ್ಲಿ ಹಲವಾರು ಕಾರಣಗಳಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ ಮೂರು ವರ್ಷಗಳಲ್ಲಿ ರಾಜ್ಯದಾದ್ಯಂತ ರೈತ ಆತ್ಮಹತ್ಯೆ ಮಾಡಿಕೊಂಡಿರುವ ಪ್ರುರಕಣಗಳು ಎಷ್ಟು; (ವಿಧಾನಸಭಾ ಕ್ಷೇತ್ರವಾರು, ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

ಕೃಷಿ ಸಾಲದಿಂದ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಈ ಕೆಳಗಿನಂತೆ ರೈತ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿರುತ್ತದೆ.

ಸಾಲು	2019-20	2020-21	2021-22	2022-23	ಒಟ್ಟು
ಪ್ರಕರಣಗಳು	1091	855	917	310	3173

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ(1) ರಲ್ಲಿ ನೀಡಲಾಗಿದೆ

ಆ)ಕಳೆದ ಮೂರು ವರ್ಷಗಳಿಂದ ಈವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ರೈತ ಆತ್ಮಹತ್ಯೆ ಮಾಡಿಕೊಂಡಿರುವ ಒಟ್ಟು ಎಷ್ಟು ಪ್ರಕರಣಗಳಿವೆ: (ಪ್ರಕರಣವಾರು/ ತಾಲ್ಲೂಕುವಾರು ಮಾಹಿತಿ ನೀಡುವುದು)

ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಕೆಳಗಿನಂತೆ ಸಾಲದ ಬಾಧೆಯಿಂದ ರೈತ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳು ವರದಿಯಾಗಿರುತ್ತದೆ.

ಕ್ರ ಸಂ	ತಾಲ್ಲೂಕು	2019-20	2020-21	2021-22	2022-23	ಒಟ್ಟು
1	ಚಿಕ್ಕಮಗಳೂರು	17	13	10	6	46
2	ಮೂಡಿಗೆರೆ	5	6	6	4	21
3	ಕೊಪ್ಪ	6	3	3	2	14
4	ಶೃಂಗೇರಿ	2	5	3	2	12
5	ನರಸಿಂಹ ರಾಜಪುರ	7	8	6	6	27
6	ತರೀಕೆರೆ	10	9	8	1	28
7	ಕಡೂರು	16	12	23	12	63
	ಒಟ್ಟು	**63**	**56**	**59**	**33**	**211**

ಪ್ರಕರಣವಾರು ವಿವರವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಇ) ರೈತ ಆತ್ಮಹತ್ಯೆಯ ಎಷ್ಟು ಪ್ರಕರಣಗಳಿಗೆ ಪರಿಹಾರ ಧನ ವಿತರಣೆ ಮಾಡಲಾಗಿದೆ. ವಿತರಣೆಗೆ ಬಾಕಿ ಇರುವ ಒಟ್ಟು ಪ್ರಕರಣಗಳೆಷ್ಟು: ವಿತರಣೆ ಮಾಡಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು : ವಿತರಣೆಯಾಗಿರುವ ಹಾಗೂ ವಿತರಣೆಗೆ ಬಾಕಿ ಇರುವ ಪ್ರಕರಣಗಳೆಷ್ಟು: (ಪರಿಹಾರ ಧನದ ಮೊತ್ತ ಹಾಗೂ ದಿನಾಂಕದೊಂದಿಗೆ ಮಾಹಿತಿ ನೀಡುವುದು)

ಚಿಕ್ಕಮಗಳೂರು ಜಿಲ್ಲೆಯಲ್ಲಿ 2019 ರಿಂದ ಇದುವರೆವಿಗೆ ಉಪವಿಭಾಗ ಮಟ್ಟದ ಸಮಿತಿಯಲ್ಲಿ ಇತ್ಯರ್ಥಗೊಂಡು 165 ಪ್ರಕರಣಗಳು ಮಂಜೂರಾಗಿದ್ದು, ಈ ಪೈಕಿ 141 ಪ್ರಕರಣಗಳಿಗೆ ಪರಿಹಾರ ವಿತರಣೆ ಮಾಡಲಾಗಿದೆ. 24 ಪ್ರಕರಣಗಳು ಬಾಕಿಯಿದ್ದು, ನೇರ ಹಣ ಸಂದಾಯ ಮೂಲಕ ವಿತರಿಸಲಾಗುವುದು.

ಉಪವಿಭಾಗಾಧಿಕಾರಿಗಳ ಸಮಿತಿಯಲ್ಲಿ ಅರ್ಹವೆಂದು ಪರಿಗಣಿಸಿ ಇತ್ಯರ್ಥಗೊಳಿಸಿದ ಎಲ್ಲಾ ಪ್ರಕರಣಗಳಿಗೆ ಪರಿಹಾರವನ್ನು ವಿತರಿಸಲಾಗುತ್ತಿದೆ ಅಗತ್ಯ ದಾಖಲೆಗಳು ಹಾಗೂ ವರದಿ ಬಾಕಿಯಿರುವ

	ಪ್ರಕರಣಗಳಲ್ಲಿ ಸಮಿತಿಯಲ್ಲಿ ಇತ್ಯರ್ಥಗೊಳಿಸಲು ವಿಳಂಬವಾದ ಹಿನ್ನಲೆಯಲ್ಲಿ ಪರಿಹಾರ ವಿತರಣೆ ಮಾಡಲು ವಿಳಂಬವಾಗುತ್ತಿರುತ್ತದೆ. ಪರಿಹಾರ ವಿತರಣೆಯಾಗಿರುವ ಹಾಗೂ ವಿತರಣೆಗೆ ಬಾಕಿ ಇರುವ ಪ್ರಕರಣವಾರು ವಿವರವನ್ನು ಅನುಬಂಧ(2) ರಲ್ಲಿ ನೀಡಲಾಗಿದೆ.
ಈ) ಬಾಕಿ ಇರುವ ಪ್ರಕರಣಗಳಿಗೆ ಅನುದಾನ ಬಿಡುಗಡೆಯಾಗದೇ ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ: (ಮಾಹಿತಿ ನೀಡುವುದು)	ಈ ಯೋಜನೆಯಡಿ ಅರ್ಜಿ ಸ್ವೀಕೃತಿಯಾದ ನಂತರ ಉಪವಿಭಾಗಧಿಕಾರಿಗಳ ನೇತೃತ್ವದ ಸಮಿತಿಯಲ್ಲಿ ಅನುಮೋದನೆಯಾದ ನಂತರ ಅನುದಾನ ಹಂಚಿಕೆ/ ಮರುಹಂಚಿಕೆ ಹಾಗೂ ಇತರೆ ಪತ್ರ ವ್ಯವಹಾರಗಳಿಗೆ ಹಾಗೂ ಸೌಲಭ್ಯ ವಿತರಣೆಗೆ ಹೆಚ್ಚಿನ ಕಾಲಾವಕಾಶ ತೆಗೆದುಕೊಳ್ಳುತ್ತಿರುವುದರಿಂದ ಸೌಲಭ್ಯ ವಿತರಣೆಯಲ್ಲಿನ ವಿಳಂಬ ಹಾಗೂ ಪ್ರಕರಣವಾರು ಮಾಹಿತಿ ಅಲಭ್ಯತೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರದ ಆದೇಶದನ್ವಯ ಸರ್ಕಾರದಿಂದ ನೀಡಲಾಗುವ ಎಲ್ಲಾ ಸೌಲಭ್ಯಗಳನ್ನು ನೇರ ಹಣ ಸಂದಾಯ ಯೋಜನೆಯಡಿ ತರಲು ಸೂಚಿಸಲಾಗಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 67 ಪಿಆರ್ ಜೆ 2022 (2) ರ ಅಧಿಸೂಚನೆಯಂತೆ ರೈತರ ಆತ್ಮಹತ್ಯೆ ಪ್ರಕರಣಗಳ ಪರಿಹಾರ ಧನವನ್ನು ನೇರ ಹಣ ಸಂದಾಯ ಯೋಜನೆಯ ಮುಖಾಂತರ ಪಾವತಿಸಲು ನಿರ್ದೇಶಿಸಲಾಗಿರುತ್ತದೆ. ಸದರಿ ಯೋಜನೆಯಡಿ ಮೃತ ರೈತ ಕುಟುಂಬ ಸದಸ್ಯರ ಬ್ಯಾಂಕ್/ ಅಂಚೆ ಉಳಿತಾಯ ಖಾತೆಗೆ ನೇರವಾಗಿ ಪರಿಹಾರ ಧನವನ್ನು ಪಾವತಿಸಲು ಕ್ರಮವಹಿಸಲಾಗುತ್ತಿರುತ್ತದೆ.
ಉ) ರೈತ ಆತ್ಮಹತ್ಯೆ ವಾರಸುದಾರರಿಗೆ ಅಥವಾ ಸಂಬಂಧಿಸಿದವರಿಗೆ ನಿಗಧಿತ ಕಾಲಮಿತಿಯೊಳಗೆ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ: ಹಾಗಿದ್ದಲ್ಲಿ ಕಾಲಮಿತಿಯನ್ನು ಸರ್ಕಾರ ನಿಗಧಿಪಡಿಸುವುದೇ: ಕಾಲಮಿತಿಯೊಳಗೆ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ: ಹಾಗಿದ್ದಲ್ಲಿ , ಕಾಲಮಿತಿಯನ್ನು ಸರ್ಕಾರ ನಿಗಧಿಪಡಿಸುವುದೇ: ಈ ಕುರಿತು ಸರ್ಕಾರದ ನಿಲುವೇನು? (ಮಾಹಿತಿ ನೀಡುವುದು)	

ಸಂಖ್ಯೆ: DSSP-LAQ- 6/2023

(ಆರ್ ಅಶೋಕ)

ಕಂದಾಯ ಸಚಿವರು

ಅನುಬಂಧ - 1

2019-20 ನೇ ಸಾಲಿನ ರೈತರ ಆತ್ಮಹತ್ಯೆ ವರದಿ

ಕ್ರ ಸಂ	ಜಿಲ್ಲೆಗಳು	ವರದಿಯಾದ ಪ್ರಕರಣಗಳು	ತಿರಸ್ಕೃತ ಪ್ರಕರಣಗಳು	ಅರ್ಹ ಪ್ರಕರಣಗಳು	ಪರಿಹಾರ ವಿತರಿಸಿರುವ ಪ್ರಕರಣಗಳು	ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು	ಎಫ್.ಎಸ್.ಎಲ್ ವರದಿಗಾಗಿ	ಇತರೆ ದಾಖಲಾತಿಗಾಗಿ
1	ಬಾಗಲಕೋಟೆ	30	3	27	27	0	0	0
2	ಬಳ್ಳಾರಿ	38	1	37	37	0	0	0
3	ಬೆಂಗಳೂರು (ಗ್ರಾ)	0	0	0	0	0	0	0
4	ಬೆಂಗಳೂರು (ನ)	1	0	1	1	0	0	0
5	ಬೆಳಗಾವಿ	86	13	73	73	0	0	0
6	ಬೀದರ್	62	16	46	46	0	0	0
7	ಚಾಮರಾಜನಗರ	3	0	3	3	0	0	0
8	ಚಿಕ್ಕಬಳ್ಳಾಪುರ	4	2	2	2	0	0	0
9	ಚಿಕ್ಕಮಗಳೂರು	63	6	57	57	0	0	0
10	ಚಿತ್ರದುರ್ಗ	43	9	34	34	0	0	0
11	ದಕ್ಷಿಣ ಕನ್ನಡ	2	0	2	2	0	0	0
12	ದಾವಣಗೆರೆ	37	16	21	21	0	0	0
13	ಧಾರವಾಡ	77	21	56	56	0	0	0
14	ಗದಗ	39	13	26	26	0	0	0
15	ಹಾಸನ	47	6	41	41	0	0	0
16	ಹಾವೇರಿ	101	19	82	82	0	0	0
13	ಕಲಬುರಗಿ	83	7	76	76	0	0	0
18	ಕೊಡಗು	9	0	9	9	0	0	0
19	ಕೋಲಾರ	4	0	4	4	0	0	0
20	ಕೊಪ್ಪಳ	24	5	19	19	0	0	0
21	ಮಂಡ್ಯ	47	7	40	40	0	0	0
22	ಮೈಸೂರು	67	16	51	51	0	0	0
23	ರಾಯಚೂರು	24	8	16	16	0	0	0
24	ರಾಮನಗರ	6	0	6	6	0	0	0
25	ಶಿವಮೊಗ್ಗ	48	8	40	40	0	0	0
26	ತುಮಕೂರು	36	7	29	29	0	0	0
27	ಉಡುಪಿ	1	0	1	1	0	0	0
28	ಉತ್ತರ ಕನ್ನಡ	9	0	9	9	0	0	0
29	ವಿಜಯಪುರ	54	2	52	52	0	0	0
30	ಯಾದಗಿರಿ	46	11	35	35	0	0	0
	ಒಟ್ಟು	1091	196	895	895	0	0	0

ಅನುಬಂಧ-1

2020-21 ನೇ ಸಾಲಿನ ರೈತರ ಆತ್ಮಹತ್ಯೆ ವರದಿ								
ಕ್ರ ಸಂ	ಜಿಲ್ಲೆಗಳು	ವರದಿಯಾದ ಪ್ರಕರಣಗಳು	ತಿರಸ್ಕೃತ ಪ್ರಕರಣಗಳು	ಅರ್ಹ ಪ್ರಕರಣಗಳು	ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು	ಎಫ್.ಎಸ್.ಎಲ್ ವರದಿಗಾಗಿ	ಇತರೆ ದಾಖಲಾತಿಗಾಗಿ	ಷರಾ
1	ಬಾಗಲಕೋಟೆ	32	0	32	0	0	0	
2	ಬಳ್ಳಾರಿ	25	3	22	0	0	0	
3	ಬೆಂಗಳೂರು (ಗ್ರಾ)	1	0	1	0	0	0	
4	ಬೆಂಗಳೂರು (ನ)	0	0	0	0	0	0	
5	ಬೆಳಗಾವಿ	83	7	76	0	0	0	
6	ಬೀದರ್	10	3	7	0	0	0	
7	ಚಾಮರಾಜನಗರ	5	0	5	0	0	0	
8	ಚಿಕ್ಕಬಳ್ಳಾಪುರ	4	1	3	0	0	0	
9	ಚಿಕ್ಕಮಗಳೂರು	55	13	42	0	0	0	
10	ಚಿತ್ರದುರ್ಗ	22	4	18	0	0	0	
11	ದಕ್ಷಿಣ ಕನ್ನಡ	1	0	1	0	0	0	
12	ದಾವಣಗೆರೆ	30	2	28	0	0	0	
13	ಧಾರವಾಡ	77	12	65	0	0	0	
14	ಗದಗ	25	7	18	0	0	0	
15	ಹಾಸನ	38	11	27	0	0	0	
16	ಹಾವೇರಿ	64	16	48	0	0	0	
17	ಕಲಬುರಗಿ	67	7	60	0	0	0	
18	ಕೊಡಗು	9	0	9	0	0	0	
19	ಕೋಲಾರ	3	0	3	0	0	0	
20	ಕೊಪ್ಪಳ	21	9	12	0	0	0	
21	ಮಂಡ್ಯ	34	0	34	0	0	0	
22	ಮೈಸೂರು	68	12	56	0	0	0	
23	ರಾಯಚೂರು	17	4	13	0	0	0	
24	ರಾಮನಗರ	2	2	0	0	0	0	
25	ಶಿವಮೊಗ್ಗ	40	4	36	0	0	0	
26	ತುಮಕೂರು	22	1	21	0	0	0	
27	ಉಡುಪಿ	1	0	1	0	0	0	
28	ಉತ್ತರ ಕನ್ನಡ	8	2	6	0	0	0	
29	ವಿಜಯಪುರ	50	6	44	0	0	0	
30	ಯಾದಗಿರಿ	41	11	30	0	0	0	
	ಒಟ್ಟು	855	137	718	0	0	0	

ಅನುಬಂಧ-1

2021-22 ನೇ ಸಾಲಿನ ರೈತರ ಆತ್ಮಹತ್ಯೆ ವರದಿ

ಕ್ರ ಸಂ	ಜಿಲ್ಲೆಗಳು	ವರದಿಯಾದ ಪ್ರಕರಣಗಳು	ತಿರಸ್ಕೃತ ಪ್ರಕರಣಗಳು	ಅರ್ಹ ಪ್ರಕರಣಗಳು	ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು	ಎಫ್.ಎಸ್.ಎಲ್ ವರದಿಗಾಗಿ	ಇತರೆ ದಾಖಲಾತಿಗಾಗಿ
1	ಬಾಗಲಕೋಟೆ	22	0	22	0	0	0
2	ಬಳ್ಳಾರಿ	29	3	26	0	0	0
3	ಬೆಂಗಳೂರು (ಗ್ರಾ)	0	0	0	0	0	0
4	ಬೆಂಗಳೂರು (ನ)	0	0	0	0	0	0
5	ಬೆಳಗಾವಿ	95	8	86	1	0	1
6	ಬೀದರ್	21	2	19	0	0	0
7	ಚಾಮರಾಜನಗರ	3	1	2	0	0	0
8	ಚಿಕ್ಕಬಳ್ಳಾಪುರ	4	0	4	0	0	0
9	ಚಿಕ್ಕಮಗಳೂರು	57	10	47	0	0	0
10	ಚಿತ್ರದುರ್ಗ	29	3	26	0	0	0
11	ದಕ್ಷಿಣ ಕನ್ನಡ	2	1	1	0	0	0
12	ದಾವಣಗೆರೆ	24	1	23	0	0	0
13	ಧಾರವಾಡ	61	11	50	0	0	0
14	ಗದಗ	34	9	25	0	0	0
15	ಹಾಸನ	54	8	45	1	0	1
16	ಹಾವೇರಿ	84	22	60	2	0	2
17	ಕಲಬುರಗಿ	40	6	34	0	0	0
18	ಕೊಡಗು	5	0	5	0	0	0
19	ಕೋಲಾರ	2	0	2	0	0	0
20	ಕೊಪ್ಪಳ	26	9	17	0	0	0
21	ಮಂಡ್ಯ	36	4	31	1	0	1
22	ಮೈಸೂರು	82	10	72	0	0	0
23	ರಾಯಚೂರು	27	6	21	0	0	0
24	ರಾಮನಗರ	0	0	0	0	0	0
25	ಶಿವಮೊಗ್ಗ	47	8	38	1	0	1
26	ತುಮಕೂರು	15	2	12	1	0	1
27	ಉಡುಪಿ	2	0	2	0	0	0
28	ಉತ್ತರ ಕನ್ನಡ	13	1	12	0	0	0
29	ವಿಜಯಪುರ	42	0	42	0	0	0
30	ಯಾದಗಿರಿ	61	9	51	1	0	1
	ಒಟ್ಟು	917	134	775	8	0	8

ಅನುಬಂಧ-1

2022-23 ನೇ ಸಾಲಿನ ರೈತರ ಆತ್ಮಹತ್ಯೆ ವರದಿ

ಕ್ರ ಸಂ	ಜಿಲ್ಲೆಗಳು	ವರದಿಯಾದ ಪ್ರಕರಣಗಳು	ತಿರಸ್ಕೃತ ಪ್ರಕರಣಗಳು	ಅರ್ಹ ಪ್ರಕರಣಗಳು	ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು	ಎಫ್.ಎಸ್.ಎಲ್ ವರದಿಗಾಗಿ	ಇತರೆ ದಾಖಲಾತಿಗಾಗಿ
1	ಬಾಗಲಕೋಟೆ	10	0	10	0	0	0
2	ಬಳ್ಳಾರಿ	11	0	3	8	0	8
3	ಬೆಂಗಳೂರು (ಗ್ರಾ)	2	0	0	2	0	2
4	ಬೆಂಗಳೂರು (ನ)	0	0	0	0	0	0
5	ಬೆಳಗಾವಿ	22	1	14	7	0	7
6	ಬೀದರ್	4	0	4	0	0	0
7	ಚಾಮರಾಜನಗರ	1	0	0	1	0	1
8	ಚಿಕ್ಕಬಳ್ಳಾಪುರ	1	0	1	0	0	0
9	ಚಿಕ್ಕಮಗಳೂರು	33	2	16	15	0	15
10	ಚಿತ್ರದುರ್ಗ	1	0	1	0	0	0
11	ದಕ್ಷಿಣ ಕನ್ನಡ	1	0	0	1	0	1
12	ದಾವಣಗೆರೆ	14	1	5	8	0	8
13	ಧಾರವಾಡ	31	9	22	0	0	0
14	ಗದಗ	17	0	13	4	0	4
15	ಹಾಸನ	19	2	16	1	0	1
16	ಹಾವೇರಿ	25	3	11	11	0	11
13	ಕಲಬುರಗಿ	1	0	0	1	0	1
18	ಕೊಡಗು	1	0	1	0	0	0
19	ಕೋಲಾರ	1	0	0	1	0	1
20	ಕೊಪ್ಪಳ	9	0	4	5	0	5
21	ಮಂಡ್ಯ	15	0	13	2	0	2
22	ಮೈಸೂರು	41	6	23	12	0	12
23	ರಾಯಚೂರು	1	0	1	0	0	0
24	ರಾಮನಗರ	0	0	0	0	0	0
25	ಶಿವಮೊಗ್ಗ	11	0	1	10	0	10
26	ತುಮಕೂರು	5	0	4	1	0	1
27	ಉಡುಪಿ	0	0	0	0	0	0
28	ಉತ್ತರ ಕನ್ನಡ	2	0	2	0	0	0
29	ವಿಜಯಪುರ	11	0	8	3	0	3
30	ಯಾದಗಿರಿ	13	0	9	4	0	4
31	ವಿಜಯನಗರ	7	0	6	1	0	1
	ಒಟ್ಟು	310	24	188	98	0	98

ಅನುಬಂಧ-2

2019-20 ನೇ ಸಾಲಿನ ಆತ್ಮಹತ್ಯೆಗೊಳಗಾದ ರೈತರ ವಿವರಗಳು ಹಾಗೂ ತೆಗೆದುಕೊಂಡ ಕ್ರಮಗಳ ಮಾಹಿತಿ, ಚಿಕ್ಕಮಗಳೂರು ಜಿಲ್ಲೆ

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಾಯ/ ಶಿಫಾರಸ್ಸು ಮಾಡಿದೆ/ತಿರಸ್ಕರಿಸಿದೆ	ಅನುದಾನ (ರೂ.ಲಕ್ಷಗಳಲ್ಲಿ)
1	ಕುಮಾರೇಗೌಡ ಬಿನ್ ವಿರೇಗೌಡ, ದಾಸರಹಳ್ಳಿ ಗ್ರಾಮ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು	65	18-04-2019 (ನೇಣು)	ಒಪ್ಪಿದೆ	5.00
2	ರಂಗಸ್ವಾಮಿ ಬಿನ್ ರಂಗೇಗೌಡ, ಈಶ್ವರಹಳ್ಳಿ ಗ್ರಾಮ , ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು	51	11-4-2019 (ವಿಷ ಸೇವನೆ)	ಒಪ್ಪಿದೆ	5.00
3	ವಿನೋದ್ ಕುಮಾರ್ ಬಿನ್ ಎಲ್.ಬಿ ಕುಮಾರ್, ಲಕ್ಕುಮನಹಳ್ಳಿ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು	26	27-05-2019 (ನೇಣು)	ಒಪ್ಪಿದೆ	5.00
4	ಶಂಕರೇಗೌಡ ಎಂ.ಎ ಬಿನ್ ಅಣ್ಣೇಗೌಡ ಮಾವಿನಗುಣಿ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು	69	28-5-2019 (ವಿಷ ಸೇವನೆ)	ಒಪ್ಪಿದೆ	5.00
5	ಅಣ್ಣೇಗೌಡ ಬಿನ್ ಭದ್ರೇಗೌಡ, ದೇವರಹಳ್ಳಿ ಗ್ರಾಮ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು	68	22-04-2019 (ನೇಣು)	ಒಪ್ಪಿದೆ	5.00
6	ಕೆಂಚಯ್ಯ ಬಿನ್ ಈರಯ್ಯ, ಕೆಳಗೂರು, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು	59	24-04-2019 (ವಿಷ ಸೇವನೆ)	ಒಪ್ಪಿದೆ	5.00
7	ಮಲ್ಲೇಶಗೌಡ ಬಿನ್ ಮಲ್ಲೇಗೌಡ, ಬಸರವಳ್ಳಿ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು	58	17-04-2019 (ನೇಣು)	ಒಪ್ಪಿದೆ	5.00
8	ಮೋಹನಗೌಡ ಬಿನ್ ಮರೀಗೌಡ, ನಿಂಗೇನಹಳ್ಳಿ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು		2-8-2019 (ನೇಣು)	ಒಪ್ಪಿದೆ	5.00
9	ದರ್ಮಾಚಾರ್ ಆಲಿಯಾಸ್ ಧರ್ಮೇಶ್ ಬಿನ್ ಪುಟ್ಟಚಾರ್, ಹಳಿಯೂರು,ಚಿಕ್ಕಮಗಳೂರು ತಾ;	ಚಿಕ್ಕಮಗಳೂರು	50	20-08-2019 (ನೇಣು)	ಒಪ್ಪಿದೆ	5.00
10	ರವಿ ಬಿನ್ ಈರೇಗೌಡ, ಕಲ್ಲಹಳ್ಳಿ, ಮಳಲೂರು, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು	52	4-08-2019 (ವಿಷಸೇವನೆ)	ಒಪ್ಪಿದೆ	5.00
11	ಮಂಜುನಾಥ ಬಿನ್ ಹೂವೇಗೌಡ, ಚಿಕ್ಕಮಾಗರವಳ್ಳಿ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು	35	19-08-2019 (ವಿಷಸೇವನೆ)	ತಿರಸ್ಕರಿಸಿದೆ	0.00
12	ನಿಂಗೇಗೌಡ ಬಿನ್ ಮುಳ್ಳೇಗೌಡ, ಮಲ್ಲೇನಹಳ್ಳಿ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು	55	30-08-2019 (ವಿಷ ಸೇವನೆ)	ಒಪ್ಪಿದೆ	5.00

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಾಯ/ ಶಿಫಾರಸ್ಸು ಮಾಡಿದೆ/ತಿರಸ್ಕರಿಸಿದೆ	ಅನುದಾನ (ರೂ.ಲಕ್ಷಗಳಲ್ಲಿ)
13	ರಾಜಕುಮಾರ ಬಿನ್ ಚನ್ನೇಗೌಡ, ಅರೇನಹಳ್ಳಿ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರ ು	45	01-09-2019 (ವಿಷಸೇವನೆ)	ಒಪ್ಪಿದೆ	5.00
14	ಧರ್ಮಾಚಾರ್ ಬಿನ್ ರಂಗಾಚಾರ್, ಹಳೇಆಲ್ದೂರು	ಚಿಕ್ಕಮಗಳೂರ ು	38	13-09-2019 (ನೇಣು)	ಒಪ್ಪಿದೆ	5.00
15	ಎಲ್.ಸಿ ಜಗದೀಶ್ ಬಿನ್ ಚನ್ನಬಸವೇಗೌಡ, ಲಕ್ಕಮ್ಮನಹಳ್ಳಿ, ಲಕ್ಯಾ ಹೋಬಳಿ	ಚಿಕ್ಕಮಗಳೂರ ು	62	18-01-2020 (ವಿಷ ಸೇವನೆ)	ಒಪ್ಪಿದೆ	5.00
16	ಮಟ್ಟಮ್ಮ ಕೋಂ ಹನುಮಂತೇಗೌಡ, ಸಾದರಹಳ್ಳಿ, ಲಕ್ಯಾ ಹೋಬಳಿ	ಚಿಕ್ಕಮಗಳೂರ ು	70	24-01-2020 (ವಿಷ ಸೇವನೆ)	ಒಪ್ಪಿದೆ	5.00
17	ಸಿ.ಆರ್ ಲೋಕೇಶ್ ಬಿನ್ ರಂಗೇಗೌಡ, ಚಿಕ್ಕಗೌಜ ಲಕ್ಯಾ ಹೋಬಳಿ	ಚಿಕ್ಕಮಗಳೂರ ು	53	05.03.2020 (ನೇಣು)	ಒಪ್ಪಿದೆ	5.00
18	ಚನ್ನಪ್ಪಗೌಡ , ಕಾರ್ಗದ್ದೆ, ಮೂಡಿಗೆರೆ ತಾಲ್ಲೂಕು	ಮೂಡಿಗೆರೆ	69	14.09.2019 (ಪಿಸ್ತೂಲ್ ನಿಂದ ಶೂಟ್ ಮಾಡಿಕೊಂಡು)	ಒಪ್ಪಿದೆ	5.00
19	ಚಂದ್ರೇಗೌಡ ಬಿನ್ ರಾಮೇಗೌಡ, ಮೂಡಿಗೆರೆ ತಾಲ್ಲೂಕು	ಮೂಡಿಗೆರೆ	55	2-10-2019 (ವಿಷಸೇವನೆ)	ಒಪ್ಪಿದೆ	5.00
20	ಗೋಪಾಲ ಬಿನ್ ಉದ್ದಯ್ಯ, ಅಣಜೂರು, ಮೂಡಿಗೆರೆ ತಾಲ್ಲೂಕು	ಮೂಡಿಗೆರೆ	39	13-09-2019 (ವಿಷಸೇವಣೆ)	ಒಪ್ಪಿದೆ	5.00
21	ಗುರುನಾಥ ಬಿನ್ ಚಂದ್ರೇಗೌಡ, ಯು. ಹೊಸಳ್ಳಿ, ಮುಡಿಗೆರೆ ತಾಲ್ಲೂಕು	ಮೂಡಿಗೆರೆ	55	10-11-2019 (ವಿಷ ಸೇವನೆ)	ಒಪ್ಪಿದೆ	5.00
22	ಸುಧಾಕರ್‌ಶೆಟ್ಟಿ ಬಿನ್ ಅಣ್ಣಶೆಟ್ಟಿ, ಮಾವಿನ ಕೆರೆ, ಮೂಡಿಗೆರೆ ತಾಲ್ಲೂಕು	ಮೂಡಿಗೆರೆ	47	05.01.2020 (ವಿಷ ಸೇವನೆ)	ಒಪ್ಪಿದೆ	5.00
23	ಕೃಷ್ಣನಾಯ್ಕ ಬಿನ್ ಮರಿಯಪ್ಪನಾಯ್ಕ, ಕೆಲಕುಳಿ, ಕೊಪ್ಪ ತಾಲ್ಲೂಕು	ಕೊಪ್ಪ	54	25.12.2019	ಒಪ್ಪಿದೆ	5.00
24	ಶೇಖರಪೂಜಾರಿ ಬಿನ್ ಶಿವಪೂಜಾರಿ, ಸಿದ್ದರಮಠ, ಕೊಪ್ಪ ತಾಲ್ಲೂಕು	ಕೊಪ್ಪ	50	11.11.2019	ಒಪ್ಪಿದೆ	5.00
25	ಪ್ರಭಾಕರ ಬಿನ್ ಮರಿಯಪ್ಪಗೌಡ, ವಂದಗದ್ದೆ, ಕೊಪ್ಪ ತಾಲ್ಲೂಕು	ಕೊಪ್ಪ	42	26.01.2020	ಒಪ್ಪಿದೆ	5.00

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಯ/ ಶಿಫಾರಸ್ಸು ಮಾಡಿದೆ/ತಿರಸ್ಕರಿಸಿದೆ	ಅನುದಾನ (ರೂ.ಲಕ್ಷಗಳಲ್ಲಿ)
26	ಲಕ್ಷ್ಮಣ ಬಿನ್ ಸುಬ್ಬಯ್ಯ, ದೊಡ್ಡಬಯಲು, ಅದ್ದಡ, ಕೊಪ್ಪ ತಾಲ್ಲೂಕು	ಕೊಪ್ಪ	35	28.11.2019	ಒಪ್ಪಿದೆ	5.00
27	ಸತೀಶ್ ಬಿನ್ ಗೋಪಾಲನಾಯ್ಕ, ಹಿರೆಕೊಡಿಗೆ, ಕೊಪ್ಪ ತಾಲ್ಲೂಕು	ಕೊಪ್ಪ	59	03.04.2019 (ನೇಣು)	ಒಪ್ಪಿದೆ	5.00
28	ಜಗದೀಶ್ ಬಂಡಾರಿ ಬಿನ್ ಚಂದ್ರ ಬಂಡಾರಿ, ಕಲ್ಲುಗುಡ್ಡೆ, ಕೊಪ್ಪ ತಾಲ್ಲೂಕು	ಕೊಪ್ಪ	50	11-07-2019 (ವಿಷಸೇವನೆ)	ಒಪ್ಪಿದೆ	5.00
29	ಕೆ.ರಾಮೇಗೌಡ ಬಿನ್ ಮಂಜಪ್ಪಗೌಡ ಅಡ್ಡಗದ್ದೆ ಗ್ರಾಮ, ಶೃಂಗೇರಿ ತಾಲ್ಲೂಕು	ಶೃಂಗೇರಿ	87	28/08/2019 [ನದಿಗೆ ಹಾರಿ]	ಒಪ್ಪಿದೆ	5.00
30	ಶ್ರೀ ಚಂದ್ರಶೇಖರ್ ಬಿನ್ ಬೆಳ್ಳಣ್ಣಹೆಗ್ಡೆ ಕೊಚ್ಚವಳ್ಳಿ ಗ್ರಾಮ, ಶೃಂಗೇರಿ ತಾಲ್ಲೂಕು	ಶೃಂಗೇರಿ	52	08-11-2019 (ವಿಷಸೇವನೆ)	ಒಪ್ಪಿದೆ	5.00
31	ರವೀಂದ್ರ ಬಿನ್ ರಾಮಯ್ಯ, ಮಡಬೂರು, ನ.ರಾ.ಪುರ ತಾಲ್ಲೂಕು	ನ.ರಾ.ಪುರ	41	1-07-2019 (ನೇಣು)	ಒಪ್ಪಿದೆ	5.00
32	ನಿಂಗಪ್ಪ ಬಿನ್ ರಾಮೇಗೌಡ, ನ.ರಾ.	ನ.ರಾ.ಪುರ	58	11-05-2019 (ನೇಣು)	ತಿರಸ್ಕರಿಸಿದೆ	0.00
33	ಮಂಜುನಾಥ ಬಿನ್ ಗೋವಿಂದೇಗೌಡ, ಕರ್ಕೇಶ್ವರ, ನ.ರಾ.ಪುರ ತಾಲ್ಲೂಕು	ನ.ರಾ.ಪುರ	52	08.07.2019 (ವಿಷ ಸೇವನೆ)	ಒಪ್ಪಿದೆ	5.00
34	ಕೃಷ್ಣಮೂರ್ತಿ ಬಿನ್ ಬೆಳ್ಳನಾಯಕ, ಅಡುವಳ್ಳಿ, ನ.ರಾ.ಪುರ ತಾಲ್ಲೂಕು	ನ.ರಾ.ಪುರ	53	28.08.2019 (ವಿಷ ಸೇವನೆ)	ಒಪ್ಪಿದೆ	5.00
35	ಅಭಿಲಾಶ್ ಬಿನ್ ಬೇಬಿ, ನಾಗಲಪುರ, ನ.ರಾ.ಪುರ ತಾಲ್ಲೂಕು	ನ.ರಾ.ಪುರ	32	8.11.2019 (ಹೊಳೆಗೆ ಹಾರಿ)	ಒಪ್ಪಿದ	5.00
36	ಯೋಹಾನಾನ್ ಬಿನ್ ಪೌಲಸ್, ಸಾಲೂರು, ನ.ರಾ.ಪುರ ತಾಲ್ಲೂಕು	ನ.ರಾ.ಪುರ	58	16.02.2020 (ವಿಷಸೇವನೆ)	ತಿರಸ್ಕರಿಸಿದೆ	0.00
37	ನಾಗೇಶ್ ಶೆಟ್ಟಿ ಬಿನ್ ಬೋಜಶೆಟ್ಟಿ, ಗುಬ್ಬಿಗಾ, ನ.ರಾ.ಪುರ ತಾಲ್ಲೂಕು	ನ.ರಾ.ಪುರ	48	16.02.2020 (ವಿಷ ಸೇವನೆ)	ಒಪ್ಪಿದೆ	5.00
38	ಚಂದ್ರಪ್ಪ ಬಿನ್ ಪಿ.ಟಿ.ದೊಡ್ಡಯ್ಯ, ಮುದಿಗೆರೆ, ತರೀಕೆರೆ ತಾಲ್ಲೂಕು	ತರೀಕೆರೆ	72	25.05.20129 (ಮಾತ್ರೆ ಸೇವನೆ)	ಒಪ್ಪಿದೆ	5.00

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಾಯ/ ಶಿಫಾರಸ್ಸು ಮಾಡಿದೆ/ತಿರಸ್ಕರಿಸಿದೆ	ಅನುದಾನ (ರೂ.ಲಕ್ಷಗಳಲ್ಲಿ)
39	ವೆಂಕಟೇಶ್ ಬಿನ್ ಸಣ್ಣತಿಮ್ಮಪ್ಪ, ಸೋಮೇನಹಳ್ಳಿ, ತರೀಕೆರೆ ತಾಲ್ಲೂಕು	ತರೀಕೆರೆ	32	31.05.2019 (ನೇಣು ಬಿಗಿದು)	ಒಪ್ಪಿದೆ	5.00
40	ಶರತ್ ಬಿನ್ ಮಂಜುನಾಥ, ಬರಗೇನಹಳ್ಳಿ, ತರೀಕೆರೆ ತಾಲ್ಲೂಕು	ತರೀಕೆರೆ	27	03.07.2019 (ನೇಣು ಬಿಗಿದು)	ಒಪ್ಪಿದೆ	5.00
41	ಸಚಿನ್ ಬಿನ್ ಜಯಪ್ಪ, ಎರೆಹೊಸೂರು, ತರೀಕೆರೆ ತಾಲ್ಲೂಕು	ತರೀಕೆರೆ	22	03-05-2019 (ನೀರಿಗೆ ಬಿದ್ದು)	ಒಪ್ಪಿದೆ	5.00
42	ಮೂರ್ತಿನಾಯ್ಕ ಬಿನ್ ಭೀಮಾನಾಯ್ಕ, ಬೇಲೇನಹಳ್ಳಿ ತಾಂಡ್ಯ, ತರೀಕೆರೆ ತಾಲ್ಲೂಕು	ತರೀಕೆರೆ	52	21-08-2019 (ನೇಣು ಬಿಗಿದು)	ತಿರಸ್ಕರಿಸಿದೆ	0.00
43	ಅತೀಕ್ ಅಹಮದ್ ಬಿನ್ ಗೌಸ್ ಪೀರ್ ಸಾಬ್ ಕಲ್ಲೇನಹಳ್ಳಿ, ಅಜ್ಜಂಪುರ ತಾಲ್ಲೂಕು	ತರೀಕೆರೆ	42	28.01.2020 (ವಿಷ ಸೇವನೆ)	ತಿರಸ್ಕರಿಸಿದೆ	0.00
44	ಕಾಡಪ್ಪ ಬಿನ್ ಬಸಪ್ಪ, ಜಾವೂರು, ಅಜ್ಜಂಪುರ ತಾಲ್ಲೂಕು	ತರೀಕೆರೆ	60	19.11.2019 (ನೇಣು)	ಒಪ್ಪಿದೆ	5.00
45	ಲೋಕೇಶಪ್ಪ ಬಿನ್ ಗಂಗಪ್ಪ, ಕೋರನಹಳ್ಳಿ, ತರೀಕೆರೆ ತಾಲ್ಲೂಕು	ತರೀಕೆರೆ	55	29-09-2019 (ವಿಷ ಸೇವನೆ)	ಒಪ್ಪಿದೆ	5.00
46	ಆನಂದಪ್ಪ ಬಿನ್ ಶೇಖರಪ್ಪ, ಅಮೃತಾಪುರ, ತರೀಕೆರೆ ತಾಲ್ಲೂಕು	ತರೀಕೆರೆ	51	08-01-2020 (ನೇಣು)	ಒಪ್ಪಿದೆ	5.00
47	ದಿಲೀಪ್‌ಕುಮಾರ್ ಬಿನ್ ಚಂದ್ರಪ್ಪ ಲಕ್ಕೀಸಾಗರ, ತರೀಕೆರೆ ತಾಲ್ಲೂಕು	ತರೀಕೆರೆ	46	5-10-2019 (ನೇಣು)	ಒಪ್ಪಿದೆ	5.00
48	ಮಂಜಪ್ಪ ಬಿನ್ ಸಿದ್ದಪ್ಪ, ಗುಡ್ಡೆಹಳ್ಳಿ, ಕಡೂರು ತಾಲ್ಲೂಕು	ಕಡೂರು	38	29.04.2019 (ನೇಣು)	ತಿರಸ್ಕರಿಸಿದೆ	-
49	ದೇವಿರಮ್ಮ ಕೋಂ. ಸಗುನಪ್ಪ, ಹೊಸೂರು, ಕಡೂರು ತಾಲ್ಲೂಕು	ಕಡೂರು	55	21.05.2019 (ವಿಷಸೇವನೆ)	ಒಪ್ಪಿದೆ	5.00
50	ರಘು ಬಿನ್ ದೇವಿರಪ್ಪ, ತಿಮ್ಮಾಪುರ, ಕಡೂರು ತಾಲ್ಲೂಕು	ಕಡೂರು	28	04.05.2019 (ನೇಣು ಬಿಗಿದು)	ಒಪ್ಪಿದೆ	5.00
51	ಚಿಕ್ಕಮ್ಮ ಕೋಂ ಕನಕಪ್ಪ, ಕುರುಬಗೆರೆ, ಕಡೂರು ತಾಲ್ಲೂಕು	ಕಡೂರು	70	28-09-2019 (ವಿಷ ಸೇವನೆ)	ಒಪ್ಪಿದೆ	5.00

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಾಯ/ ಶಿಫಾರಸ್ಸು ಮಾಡಿದೆ/ತಿರಸ್ಕರಿಸಿದೆ	ಅನುದಾನ (ರೂ.ಲಕ್ಷಗಳಲ್ಲಿ)
52	ಕುಮಾರಸ್ವಾಮಿ ಬಿನ್ ಗೋವಿಂದಪ್ಪ, ಯರೇಹಳ್ಳಿ, ಕಡೂರು ತಾಲ್ಲೂಕು	ಕಡೂರು	38	10-07-2019 (ವಿಷ ಸೇವನೆ)	ಒಪ್ಪಿದೆ	5.00
53	ರವಿಕುಮಾರ್ ಬಿನ್ ಗಂಗಾಧರಪ್ಪ, ಪಟ್ಟಣಗೆರೆ, ಕಡೂರು ತಾಲ್ಲೂಕು	ಕಡೂರು	34	08-11-2019 (ನೇಣು)	ಒಪ್ಪಿದೆ	5.00
54	ಸೋಮಶೇಖರಪ್ಪ ಬಿನ್ ವೀರಪ್ಪ, ಬಳ್ಳಿಗನೂರು, ಕಡೂರು ತಾಲ್ಲೂಕು	ಕಡೂರು	50	17-06-2019 (ವಿಷ ಸೇವನೆ)	ಒಪ್ಪಿದೆ	5.00
55	ಚನ್ನಪ್ಪ ಬಿನ್ ಹನುಮಂತಪ್ಪ, ಉಡುಗೆರೆ, ಕಡೂರು ತಾಲ್ಲೂಕು	ಕಡೂರು	65	23-08-2019 (ನೇಣು)	ಒಪ್ಪಿದೆ	5.00
56	ರಾಜು ಬಿನ್ ಗೋವಿಂದಪ್ಪ, ಮಲ್ಲೇದೇವಿಹಳ್ಳಿ, ಕಡೂರು ತಾಲ್ಲೂಕು	ಕಡೂರು		30-11-2019 (ನೇಣು)	ಒಪ್ಪಿದೆ	5.00
57	ಚಂದ್ರಪ್ಪ ಬಿನ್ ಲೇಟ್ ಹನುಮಣ್ಣ, ಯರೇಹಳ್ಳಿ, ಕಡೂರು ತಾಲ್ಲೂಕು	ಕಡೂರು		22-09-2019 (ನೇಣು)	ಒಪ್ಪಿದೆ	5.00
58	ಸಿದ್ದಪ್ಪ ಬಿನ್ ನರಸಪ್ಪ, ಹೆಚ್.ರಾಂಪುರ, ಕಡೂರು ತಾಲ್ಲೂಕು	ಕಡೂರು	40	26-08-2019 (ವಿಷ ಸೇವನೆ)	ಒಪ್ಪಿದೆ	5.00
59	ಧನಪಾಲನಾಯ್ಕ ಬಿನ್ ಗೋವಿಂದನಾಯ್ಕ ,ಸೋಮನಹಳ್ಳಿ ತಾಂಡ್ಯ,ಕಡೂರು (ತಾ)	ಕಡೂರು	47	21.03.2020 (ವಿಷ ಸೇವನೆ)	ಒಪ್ಪಿದೆ	5.00
60	ಬಿ.ಆರ್.ಕುಮಾರ್ ಬಿನ್ ಬಿ.ವಿ.ರುದ್ರಪ್ಪ ಬೀರೂರು ಕಡೂರು (ತಾ)	ಕಡೂರು	51	19.01.2020 (ನೇಣು)	ಒಪ್ಪಿದೆ	5.00
61	ತರುಣ್ ಕುಮಾರ್ ಬಿನ್ ಬಿ.ಟಿ.ಶಿವಣ್ಣ ಎಸ್ ಬಿದರೆ ಗ್ರಾಮ, ಕಡೂರು (ತಾ)	ಕಡೂರು	25	10.03.2020 (ನೇಣು)	ಒಪ್ಪಿದೆ	5.00
62	ಪರಮೇಶ್ವರಪ್ಪ ಬಿನ್ ಬೈರಪ್ಪ, ಕಸುವನಹಳ್ಳಿ, ಕಡೂರು ತಾಲ್ಲೂಕು	ಕಡೂರು	61	04-03-2020 (ನೇಣು)	ಒಪ್ಪಿದೆ	5.00
63	ಲೋಕೇಶ್ ಬಿನ್ ಪುಟ್ಟಸ್ವಾಮಿ, ಕಡೂರಳ್ಳೀ ಕಸಬಾ (ಹೋ), ಕಡೂರು (ತಾ)	ಕಡೂರು	40	13.03.202 (ನೇಣು)	ಒಪ್ಪಿದೆ	5.00
						285

ಅನುಬಂಧ-2

2020-21 ನೇ ಸಾಲಿನ ಆತ್ಮಹತ್ಯೆಗೊಳಗಾದ ರೈತರ ವಿವರಗಳು ಹಾಗೂ ತೆಗೆದುಕೊಂಡ ಕ್ರಮಗಳ ಮಾಹಿತಿ, ಚಿಕ್ಕಮಗಳೂರು ಜಿಲ್ಲೆ

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಾಯ/ಶಿಪಾರಸ್ಸು	ಅನುದಾನ (ರೂ.ಲಕ್ಷಗಳಲ್ಲಿ)
1	ಹುಲಿಗೌಡ ಬಿನ್ ದೊಡ್ಡಹುಡುಗೇಗೌಡ, ಈಶ್ವರಹಳ್ಳಿ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳ ೂರು	55	27.07.2020	ಒಪ್ಪಿದೆ	5.00
2	ಯೋಗೇಶ್‌ಎಸ್ ಬಿನ್ ಕುಮಾರ್, ಬಿಳೆಕಲ್ಲಹಳ್ಳಿ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳ ೂರು	35	01.08.2020	ತಿರಸ್ಕರಿಸಿದೆ	0.00
3	ಮಲ್ಲೇಶ ಬಿನ್ ಬೀರೇಗೌಡ, ಕೆಂಗೇನಹಳ್ಳಿ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳ ೂರು	53	29.09.2020	ತಿರಸ್ಕರಿಸಿದೆ	0.00
4	ಈರಶೆಟ್ಟಿ ಬಿನ್ ದ್ಯಾವಶೆಟ್ಟಿ, ಅಂಬಳೆ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳ ೂರು	58	20.10.2020	ಒಪ್ಪಿದೆ	5.00
5	ಸುರೇಶ್ ಬಿನ್ ಅಣ್ಣಪ್ಪಶೆಟ್ಟಿ, ಮಾಗಲು, ಖಾಂಡ್ಯ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳ ೂರು	56	20.11.2020	ಒಪ್ಪಿದೆ	5.00
6	ಹೆಚ್.ಆರ್ ಗಿರೀಶ್ ಬಿನ್ ರುದ್ರೇಗೌಡ, ಕೋಟೆವೂರು ವಸ್ತಾರೆ ಹೋಬಳಿ	ಚಿಕ್ಕಮಗಳ ೂರು	53	28.11.2020	ಒಪ್ಪಿದೆ	5.00
7	ಟಿ.ಆರ್. ನಾಗೇಶ್ ಬಿನ್ ಟಿ.ಜಿ ರಾಮೇಗೌಡ ಬ್ಯಾರವಳ್ಳಿ, ಮಲ್ಲಂದೂರು ಪೋಸ್ಟ್,ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳ ೂರು	48	22-12-2020	ತಿರಸ್ಕರಿಸಿದೆ	0.00

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಯ/ಶಿಫಾರಸ್ಸು	ಅನುದಾನ (ರೂ.ಲಕ್ಷಗಳಲ್ಲಿ)
8	ಸೋಮಶೇಖರ್ ಕೆ.ಎ ಬಿನ್ ಅಜ್ಜೇಗೌಡ, ಕೆಂಪನಹಳ್ಳಿ, ಕಸಬಾ ಹೋಬಳಿ,ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು	60	05.01.2021 (ವಿಷ ಸೇವನೆ)	ಒಪ್ಪಿದೆ	5.00
9	ಧರ್ಮೇಶ್ ಬಿನ್ ಪುಟ್ಟೇಗೌಡ, ಹಲಸುಮನೆ, ವಸ್ತಾರೆ ಹೋಬಳಿ	ಚಿಕ್ಕಮಗಳೂರು		04.02.2021 (ವಿಷ ಸೇವನೆ)	ಒಪ್ಪಿದೆ	5.00
10	ಚಂದ್ರೇಗೌಡ ಬಿನ್ ಗುಡ್ಡೇಗೌಡ, ಅಂಚಿಹಳ್ಳಿ, ಈಶ್ವರಹಳ್ಳಿ ಅಂಚೆ ಲಕ್ಯಾ ಹೋಬಳಿ	ಚಿಕ್ಕಮಗಳೂರು	42	20.02.2021 (ವಿಷ ಸೇವನೆ)	ಒಪ್ಪಿದೆ	5.00
11	ಚಂದ್ರೇಗೌಡ ಬಿನ್ ಲೇಟ್ ಪುಟ್ಟಸ್ವಾಮೇಗೌಡ, ವಸ್ತಾರೆ ಹೋಬಳಿ	ಚಿಕ್ಕಮಗಳೂರು	68	24.03.2021 (ವಿಷ ಸೇವನೆ)	ಒಪ್ಪಿದೆ	5.00
12	ಮಂಜೇಗೌಡ ಬಿನ್ ರಾಮೇಗೌಡ, ಹೂವೇನಹಳ್ಳಿ, ಲಕ್ಯಾ ಹೋಬಳಿ	ಚಿಕ್ಕಮಗಳೂರು		07.12.2020 (ವಿಷ ಸೇವನೆ)	ತಿರಸ್ಕರಿಸಿದೆ	0.00
13	ಕೃಷ್ಣೇಗೌಡ ಬಿನ್ ಶಿವೇಗೌಡ, ಸಿದ್ದಾಪುರ, ಜಾಗರ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು	ಚಿಕ್ಕಮಗಳೂರು	39	10.12.2020 (ವಿಷ ಸೇವನೆ)	ಒಪ್ಪಿದೆ	5.00
14	ಉಮೇಶ್ ಬಿನ್ ಬುರುಡೇಗೌಡ, ಹಳೇಕೆರೆ, ಮೂಡಿಗೆರೆ ತಾಲ್ಲೂಕು	ಮೂಡಿಗೆರೆ	55	21.05.2020 (ನೇಣು)	ಒಪ್ಪಿದೆ	5.00
15	ಕಿರಣ್ ಬಿನ್ ಬೋಬಣ್ಣಗೌಡ, ಬಿದರಹಳ್ಳಿ, ಮೂಡಿಗೆರೆ ತಾಲ್ಲೂಕು	ಮೂಡಿಗೆರೆ	52	08.08.2020 (ವಿಷ ಸೇವನೆ)	ಒಪ್ಪಿದೆ	5.00

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಾಯ/ಶಿಪಾರಸ್ಸು	ಅನುದಾನ (ರೂ.ಲಕ್ಷಗಳಲ್ಲಿ)
16	ಉಮೇಶ್ ಹೆಚ್ ಕೆ ಬಿನ್ ಕರಿಯಪ್ಪಗೌಡ ಹಡತಾಳ,ಬಾಳೂರು ಹೋಬಳಿ , ಮೂಡಿಗೆರೆ ತಾಲ್ಲೂಕು	ಮೂಡಿಗೆರೆ	46	18.10.2020 (ವಿಷ)	ಒಪ್ಪಿದೆ	5.00
17	ಶ್ರೀ ಬಿ.ಎಮ್ ಶ್ರೀಧರ್ ಬಿನ್ ಮುಳ್ಳೇಗೌಡ ಭೈರಾಪುರ ಗ್ರಾಮ, ಮೂಡಿಗೆರೆ ತಾಲ್ಲೂಕು	ಮೂಡಿಗೆರೆ	60	22-12-2020	ಒಪ್ಪಿದೆ	5.00
18	*ಶ್ರೀಮತಿ ಈ. ಡಿ ಮಂಜುಳ ಕೋಂ ಗೋಪಾಲಗೌಡ ಹ್ಯಾರೆಗುಡ್ಡ, ಬಣಕಲ್ ಹೋಬಳಿ.ಮೂಡಿಗೆರೆ ತಾಲ್ಲೂಕು*	ಮೂಡಿಗೆರೆ	70	21.01.2021	ಒಪ್ಪಿದೆ	5.00
19	ಶ್ರೀ ತಿಲಕ್ ಬಿನ್ ಚಂದ್ರೇಗೌಡ, ಚೆನ್ನಡ್ಲು ಗ್ರಾಮ, ಬಾಳೂರು ಹೋಬಳಿ	ಮೂಡಿಗೆರೆ	61	19.03.2021(ನೇಣು ಬಿಗಿದುಕೊಂಡು)	ಒಪ್ಪಿದೆ	5.00
20	ಬೆಳ್ಳಪ್ಪನಾಯ್ಕ ಬಿನ್ ಗಿಡ್ಡನಾಯ್ಕ, ನಿಲುವಾಗಿಲು, ಕೊಪ್ಪ ತಾಲ್ಲೂಕು	ಕೊಪ್ಪ	65	25.05.2020	ಒಪ್ಪಿದೆ	5.00
21	ಮಲ್ಲಪ್ಪಗೌಡ ಬಿನ ರಾಮೇಗೌಡ ದಯಂಬಳ್ಳಿ ಕೊಪ್ಪ ತಾಲ್ಲೂಕು	ಕೊಪ್ಪ	65	11.01.2021	ಒಪ್ಪಿದೆ	5.00
22	ಉದಯಕುಮಾರ್ ಬಿನ್ ಅನಂತಯ್ಯ ಜಯಪುರ, ಮೇಗುಂದ ಹೋಬಳಿ, ಕೊಪ್ಪ ತಾಲ್ಲೂಕು	ಕೊಪ್ಪ	42	05.03.2021 (ನೇಣು)	ತಿರಸ್ಕರಿಸಿದೆ	0.00
23	ಶೇಷಗಿರಿ ಬಿನ್ ಸುಬ್ಬರಾಯ, ಮಸಿಗೆ, ಶೃಂಗೇರಿ ತಾಲ್ಲೂಕು	ಶೃಂಗೇರಿ	58	28.05.2020	ಒಪ್ಪಿದೆ	5.00

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಾಯ/ಶಿಪಾರಸ್ಸು	ಅನುದಾನ (ರೂ.ಲಕ್ಷಗಳಲ್ಲಿ)
24	ಕೆ.ಎಂ.ಶಿವಪ್ಪ ಬಿನ್ ಮರಿಯಪ್ಪನಾಯ್ಕ, ಮಾದಲಬೈಲು, ನೆಮ್ಮಾರು, ಶೃಂಗೇರಿ ತಾಲ್ಲೂಕು	ಶೃಂಗೇರಿ	62	06/06/2020 (ಗುಂಡು ಹಾರಿಸಿಕೊಂಡು)	ಒಪ್ಪಿದೆ	5.00
25	ತಿಮ್ಮಪ್ಪಗೌಡ ಬಿನ್ ಗುಂಡೇಗೌಡ ಬೆಟ್ಟಗೇರಿ, ಶೃಂಗೇರಿ ತಾಲ್ಲೂಕು	ಶೃಂಗೇರಿ	75	07.07.2020	ಒಪ್ಪಿದೆ	5.00
26	ದೇವೇಂದ್ರ ಬಿನ್ ಅಯ್ಯಪ್ಪಗೌಡ, ಮರಟೆ, ಮಸಿಗೆ, ಶೃಂಗೇರಿ ತಾಲ್ಲೂಕು	ಶೃಂಗೇರಿ	50	04.09.2020	ಒಪ್ಪಿದೆ	5.00
27	ದಿನೇಶಗೌಡ ಬಿನ್ ಕಳಸಪ್ಪಗೌಡ ತೆಕ್ಕೂರು ಗ್ರಾಮ ಶೃಂಗೇರಿ ತಾಲ್ಲೂಕು	ಶೃಂಗೇರಿ	48	13–10–2020 ರಂದು ತುಂಗಾನದಿಗೆ ಹಾರಿ ಆತ್ಮಹತ್ಯೆ	ಒಪ್ಪಿದೆ	5.00
28	ರಾಮಪ್ಪ ಬಿನ್ ಮುಕುಂದಪ್ಪ, ಬೈರಾಪುರ, ನ.ರಾ.ಪುರ ತಾಲ್ಲೂಕು	ನ.ರಾ.ಪುರ	45	25.05.2020 (ಬೆಂಕಿಹಚ್ಚಿಕೊಂಡು)	ಒಪ್ಪಿದೆ	5.00
29	ಸತೀಶ್ ಬಿನ್ ಚಿನ್ನಯ್ಯಗೌಡ, ಅರಳೀಕೊಪ್ಪ, ನ.ರಾಪುರ ತಾಲ್ಲೂಕು	ನ.ರಾ.ಪುರ	39	11.06.2020 (ವಿಷ ಸೇವನೆ)	ಒಪ್ಪಿದೆ	5.00
30	ಹರೀಶ್ ಬಿನ್ ನಾರಾಯಣಸ್ವಾಮಿ, ಅರಳಿಕೊಪ್ಪ, ನ.ರಾ.ಪುರ ತಾಲ್ಲೂಕು	ನ.ರಾ.ಪುರ	39	17/06/2020 (ವಿಷಸೇವನೆ))	ಒಪ್ಪಿದೆ	5.00
31	ಶಂಕರಪ್ಪ ಎಂ.ಎಸ್. ಬಿನ್ ಸುಬ್ಬಣ್ಣ, ಕುಸುಬೂರು ಗ್ರಾಮ, ನರಸಿಂಹರಾಜಪುರ ತಾಲ್ಲೂಕು	ನ.ರಾ.ಪುರ	58	25.08.2020 (ವಿಷಸೇವನೆ)	ಒಪ್ಪಿದೆ	5.00

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಾಯ/ಶಿಫಾರಸ್ಸು	ಅನುದಾನ (ರೂ.ಲಕ್ಷಗಳಲ್ಲಿ)
32	ಸುಧಾಕರ ಬಿನ್ ವೆಂಕಟೇಗೌಡ, ಶಿಂಸೆ ಗ್ರಾಮ, ನರಸಿಂಹರಾಜಪುರ ತಾಲ್ಲೂಕು	ನ.ರಾ.ಪುರ	62	28.10.2020 (ವಿಷಸೇವನೆ)	ತಿರಸ್ಕರಿಸಿದೆ	0
33	ವೀಣಾ ಕೋಂ ಭಿಷ್ಮಯ್ಯ, ಈಚಿಕೆರೆ ಗ್ರಾಮ, ನರಸಿಂಹರಾಜಪುರ ತಾಲ್ಲೂಕು	ನ.ರಾ.ಪುರ	48	13.01.2021 (ನೇಣು ಬಿಗಿದುಕೊಂಡು)	ಒಪ್ಪಿದೆ	5.00
34	ಚಂದ್ರಾವತಿ ಕೋಂ ಲೇಟ್ ಎನ್.ಆರ್.ಸ್ವಾಮಿ, ಅರಳೀಕೊಪ್ಪ, ನರಸಿಂಹರಾಜಪುರ ತಾಲ್ಲೂಕು	ನ.ರಾ.ಪುರ	45	19.02.2021 (ವಿಷಸೇವನೆ)	ಒಪ್ಪಿದೆ	5.00
35	ಮೀನಾಕ್ಷಿ ಕೋಂ ಪ್ರಭಾಕರ, ಸಂಕ್ಸೆ, ನರಸಿಂಹರಾಜಪುರ ತಾಲ್ಲೂಕು	ನ.ರಾ ಪುರ	48	24.03.2021 (ವಿಷಸೇವನೆ)	ಒಪ್ಪಿದೆ	5.00
36	ಮಾಣಿಕ್ಯ ಬಿನ್ ಲೇ ಕುಪ್ಪುಸ್ವಾಮಿ, ಸೀತಾಪುರ ಕಾವಲು, ತರೀಕೆರೆ (ತಾ)	ತರೀಕೆರೆ	80	19-05-2020	ತಿರಸ್ಕರಿಸಿದೆ	0.00
37	ಮುರುಳಿನಾಯ್ಕ ಬಿನ್ ಲಕ್ಷ್ಮನಾಯ್ಕ, ಲಿಂಗದಹಳ್ಳಿ, ತರೀಕೆರೆ ತಾಲ್ಲೂಕು	ತರೀಕೆರೆ	36	31/05/2020 (ವಿಷ ಸೇವನೆ)	ಒಪ್ಪಿದೆ	5.00
38	ಶ್ರೀಮತಿ ಚಂದ್ರಮ್ಮ ಕೋಂ ರಂಗಪ್ಪ, ಬೇಗೂರು ಗ್ರಾಮ, ಕಸಬಾ ಹೋಬಳಿ, ಅಜ್ಜಂಪುರ ತಾಲ್ಲೂಕ್	ತರೀಕೆರೆ	65	03.10.2020	ಒಪ್ಪಿದೆ	5.00
39	ರುದ್ರೇಶ್ ಬಿನ್ ಲೇಟ್ ಲಕ್ಷ್ಮಣನಾಯ್ಕ, ಸಂತವೇರಿ, ಲಿಂಗದಹಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು.	ತರೀಕೆರೆ	32	08-10-2020 (ವಿಷ ಸೇವನೆ)	ಒಪ್ಪಿದೆ	5.00

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಾಯ/ಶಿಪಾರಸ್ಸು	ಅನುದಾನ (ರೂ.ಲಕ್ಷಗಳಲ್ಲಿ)
40	ಶ್ರೀ ಈರಣ್ಣ ಬಿನ್ ಲೇ ಹನುಮಯ್ಯ ಉಡೇವಾ ಗ್ರಾಮ ಲಿಂಗದಹಳ್ಳಿ ಹೋ	ತರೀಕೆರೆ	65	28-12-2020	ಒಪ್ಪಿದೆ	5.00
41	ಶ್ರೀ ಮಂಜಪ್ಪ ಬಿನ್ ಲೇ ಕೃಷ್ಣಪ್ಪ ಉಡೇವಾ ಗ್ರಾಮ ಲಿಂಗದಹಳ್ಳಿ ಹೋಬಳಿ	ತರೀಕೆರೆ	65	28-12-2020	ತಿರಸ್ಕರಿಸಿದೆ	0.00
42	ಶ್ರೀ ನಾಗಲಿಂಗೇಶ್ ಬಿನ್ ರೇವಣ್ಣ, ಬಾವಿಕೆರೆ, ಲಕ್ಕವಳ್ಳಿ, ಹೋಬಳಿ	ತರೀಕೆರೆ	52	UDR/05/2021 22-01-2021 (ನೀರಲ್ಲಿ ಮುಳಗಿ)	ಒಪ್ಪಿದೆ	5.00
43	ರಾಕೇಶ್ ಬಿನ್ ಲೇ ಲೋಕೇಶಪ್ಪ ಉಡೇವ ಲಿಂಗದಹಳ್ಳಿ (ಹೋ)	ತರೀಕೆರೆ	21	07.09.2020 (ವಿಷಸೇವನೆ)	ಒಪ್ಪಿದೆ	5.00
44	ವೆಂಕಟೇಶ್ ಬಿನ್ ಪೊನ್ನುಸ್ವಾಮಿ ದುಗ್ಲಾಪುರ ತರೀಕೆರೆ	ತರೀಕೆರೆ			ಒಪ್ಪಿದೆ	
45	ಶ್ರೀಮತಿ ಗಂಗಮ್ಮ ಕೋಂ ಗೋಪಾಲ್, ಬಿ ಕೆ ಹೊಸೂರು, ಕಡೂರ್(ತಾ)	ಕಡೂರು	31	10.05.2020 (ವಿಷ ಸೇವನೆ)	ಒಪ್ಪಿದೆ	5.00
46	ಶೇಖರಪ್ಪ ಬಿನ್ ತಿಮ್ಮಪ್ಪ ಯಳ್ಳಂಬಳಸೆ, ಯಗಟಿ (ಹೋ), ಕಡೂರು (ತಾ)	ಕಡೂರು	56	18.06.2020 (ವಿಷಸೇವನೆ)	ಒಪ್ಪಿದೆ	5.00
47	ರವಿ ಎನ್ ಎಸ್ ಬಿನ್ ಲೇಟ್ ಸಿದ್ದಪ್ಪ ಟಿ.ಬಿ.ಕಾವಲು ಕಡೂರ್(ತಾ)	ಕಡೂರು	46	03.07.2020 (ನೇಣು)	ಒಪ್ಪಿದೆ	5.00

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಾಯ/ಶಿಪಾರಸ್ಸು	ಅನುದಾನ (ರೂ.ಲಕ್ಷಗಳಲ್ಲಿ)
48	ಕರಿಯಪ್ಪ ಬಿನ್ ಹನುಮಂತಪ್ಪ, ಯರೇಹಳ್ಳಿ, ಬೀರೂರು ಹೋಬಳಿ, ಕಡೂರು ತಾಲ್ಲೂಕು	ಕಡೂರು	71	28.08.2020 (ನೇಣು)	ಒಪ್ಪಿದೆ	5.00
49	ನಂಜುಂಡಪ್ಪ ಬಿನ್ ಮುದಿಯಪ್ಪ, ಇಂಗಾರನಹಳ್ಳಿ, ಬೀರೂರು ಹೋಬಳಿ, ಕಡೂರು ತಾಲ್ಲೂಕು	ಕಡೂರು	46	10.12.2020 (ನೇಣು)	ಒಪ್ಪಿದೆ	5.00
50	ಮಲ್ಲಪ್ಪ ಬಿನ್ ಬಸಪ್ಪ, ಆಲದಹಳ್ಳಿ, ಯಗಟಿ ಹೋಬಳಿ, ಕಡೂರು ತಾಲ್ಲೂಕು	ಕಡೂರು	70	10.12.2020 (ನೇಣು)	ಒಪ್ಪಿದೆ	5.00
51	ಹನುಮಂತಪ್ಪ ಬಿನ್ ತಿಮ್ಮಣ್ಣ ಹುಲ್ಲೇಹಳ್ಳಿ ಗ್ರಾಮ, ಬೀರೂರು (ಹೋ) ಕಡೂರು (ತಾ)	ಕಡೂರು	65	23.12.2020	ಒಪ್ಪಿದೆ	5.00
52	ಮೀನಾಕ್ಷಿ ಬಿನ್ ಗಿರೀಶ್ ಚಿಕ್ಕಬಾಸೂರು (ಗ್ರಾ) ಹಿರೇನಲ್ಲೂರು (ಹೋ)ಕಡೂರು (ತಾ) UDR No: 0001	ಕಡೂರು	36	14.01.2021 (ವಿಷ ಸೇವನೆ)	ತಿರಸ್ಕರಿಸಿದೆ	0.00
53	ಸೋಮಶೇಖರಪ್ಪ ಬಿನ್ ಮರುಳಸಿದ್ದಪ್ಪ, ಹುಳಿಗೆರೆ (ಗ್ರಾ), ಯಗಟಿ (ಹೋ), ಕಡೂರು (ತಾ) UDR No: 0001/2021, ದಿನಾಂಕ: 19.01.2021	ಕಡೂರು	45	19.01.2021	ತಿರಸ್ಕರಿಸಿದೆ	0.00
54	ಮಂಜಪ್ಪ ಬಿನ್ ಗೋವಿಂದಪ್ಪ ಯಗಟಿ (ಗ್ರಾ) ಯಗಟಿ(ಹೋ)ಕಡೂರು (ತಾ) UDR No: 0004 ದಿನಾಂಕ:05.02.2021	ಕಡೂರು	51	04.02.2021 ವಿಷ	ತಿರಸ್ಕರಿಸಿದೆ	0.00

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಯ/ಶಿಪಾರಸ್ಸು	ಅನುದಾನ (ರೂ.ಲಕ್ಷಗಳಲ್ಲಿ)
55	ರುದ್ರಪ್ಪ ಬಿನ್ ಬಸಪ್ಪ, ಹ್ಯಾರಲಘಟ್ಟ (ಗ್ರಾ), ಸಿಂಗಟಗೆರೆ (ಹೋ), ಕಡೂರು (ತಾ) UDR No: 0002/2021, ದಿನಾಂಕ: 19.03.2021	ಕಡೂರು	68	18.03.2021	ತಿರಸ್ಕರಿಸಿದೆ	0.00
56	ಶ್ರೀಮತಿ ವರ್ಧಿನಿ ಕೋಂ ಸಂದೇಶ್ ಗೌಡ, ಕಾಚಾಪುರ, ಕಸಬಾ (ಹೋ) ಕಡೂರು (ತಾ)ಚಿಕ್ಕಮಗಳೂರು ಪೋಲೀಸ್ ಠಾಣೆ	ಕಡೂರು	33	20.03.2021 (ವಿಷಸೇವನೆ)	ಒಪ್ಪಿದೆ	5.00

ಅನುಬಂಧ-2

2021-22 ನೇ ಸಾಲಿನ ಆತ್ಮಹತ್ಯೆಗೊಳಗಾದ ರೈತರ ವಿವರಗಳು ಹಾಗೂ ತೆಗೆದುಕೊಂಡ ಕ್ರಮಗಳ ಮಾಹಿತಿ, ಚಿಕ್ಕಮಗಳೂರು ಜಿಲ್ಲೆ

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಾಯ/ಶಿಫಾರಸ್ಸು/ ಮಾಡಿದೆ/ತಿರಸ್ಕರಿಸಿದೆ	ಅನುದಾನ (ರೂ.ಲಕ್ಷಗಳಲ್ಲಿ)
1	ಭೀಮಾನಾಯ್ಕ ಬಿನ್ ಕಾಳ್ಯನಾಯ್ಕ ಸೇವಾಪುರ (ಗ್ರಾ) ಕಸಬಾ (ಹೋ): UDR No: 0013/2021, ದಿನಾಂಕ:20.05.2021	ಕಡೂರು	67	20.05.2021 (ವಿಷ)	ಒಪ್ಪಿದೆ	5.00
2	ಚಿಕ್ಕೇಗೌಡ ಬಿನ್ ಗಂಗಪ್ಪ, ಎಸ್. ಕೋಡಿಹಳ್ಳಿ (ಗ್ರಾಮ), ಸಿಂಗಟಗೆರೆ (ಹೋ) (ತಾ) UDR No :0004/2021, ದಿನಾಂಕ: 19.06.2021	ಕಡೂರು	65	19.06.2021 (ವಿಷ)	ಒಪ್ಪಿದೆ	5.00
3	ಚಂದ್ರಪ್ಪ ಬಿನ್ ಕೆಂಚಪ್ಪ, ಕುರುಬಗೆರೆ (ಗ್ರಾಮ), ಕಸಬಾ (ಹೋ), ಕಡೂರು (ತಾ)	ಕಡೂರು	38	21.06.2021 (ನೇಣು)	ಒಪ್ಪಿದೆ	5.00
4	ಲಕ್ಷ್ಮಮ್ಮ ಕೋಂ ರಂಗಪ್ಪ, ಜೋಡಿತಿಮ್ಮಾಪುರ (ಗ್ರಾ), ಬೀರೂರು (ಹೋ), UDR No: 0010/2021, ದಿನಾಂಕ: 24.06.2021	ಕಡೂರು	48	23.06.2021 (ವಿಷ)	ಒಪ್ಪಿದೆ	5.00
5	ಸತೀಶ್ ಕೆ. ಆರ್. ಬಿನ್ ರಾಜಪ್ಪ, ಕಡೂರಳ್ಳಿ (ಗ್ರಾಮ), ಕಸಬಾ (ಹೋ)	ಕಡೂರು	44	01-07-2021 (ನೇಣು)	ಒಪ್ಪಿದೆ	5.00
6	ಪಿ. ಎಸ್ ಯತೀಶ್ ಬಿನ್ ಪಿ. ಎನ್. ಶಿವಮೂರ್ತಿ ಪಿಳ್ಳೇನಹಳ್ಳಿ(ಗ್ರಾ) ಸಖರಾಯಪಟ್ಟಣ (ಹೋ)ಕಡೂರು (ತಾ) ಯುಡಿಆರ್ ನಂ 0020 ದಿನಾಂಕ:27.07.2021	ಕಡೂರು	38	27.07.2021 ನೇಣು	ತಿರಸ್ಕರಿಸಿದೆ	
7	ಓಂಕಾರಪ್ಪ ಬಿನ್ ನಿಂಗಪ್ಪ ಮಂಜಿಹಳ್ಳಿ(ಗ್ರಾ) ಸಖರಾಯಪಟ್ಟಣ (ಹೋ)ಕಡೂರು (ತಾ) ಯುಡಿಆರ್ ನಂ ದಿನಾಂಕ:	ಕಡೂರು	42	02.08.2021 ನೇಣು	ಒಪ್ಪಿದೆ	5.00
8	ಬಸವರಾಜು ಕೆ. ಎನ್. ಬಿನ್ ನಾಗಪ್ಪ, ಕಡೂರಳ್ಳಿ(ಗ್ರಾ) ಕಸಬಾ(ಹೋ)ಕಡೂರು (ತಾ) ಯುಡಿಆರ್ ನಂ 0033 ದಿನಾಂಕ:07.08.2021	ಕಡೂರು	55	07.08.2021 ಚಲಿಸುತ್ತಿರುವ ರೈಲಿಗೆ ತಲೆಕೊಟ್ಟು	ಒಪ್ಪಿದೆ	5.00
9	ಗೋವಿಂದ ನಾಯ್ಕ ಬಿನ್ ಪಾಪನಾಯ್ಕ ಎಂ.ಕೋಡಿಹಳ್ಳಿ (ಗ್ರಾ) ಕಸಬಾ(ಹೋ) ಕಡೂರು (ತಾ) ಯುಡಿಆರ್ ನಂ0026 ದಿನಾಂಕ:20.08.2021	ಕಡೂರು	70	20.08.2021 ವಿಷ ಸೇವನೆ	ತಿರಸ್ಕರಿಸಿದೆ	
10	ರಾಜಪ್ಪ ಬಿನ್ ತಿಮ್ಮಯ್ಯ, ಆಲಘಟ್ಟ (ಗ್ರಾ) ಕಸಬಾ(ಹೋ) ಕಡೂರು (ತಾ) UDR No:0025 ದಿನಾಂಕ:14.08.2021	ಕಡೂರು	55	14-08-2021 ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ	ಒಪ್ಪಿದೆ	5.00
11	ವಿರೂಪಾಕ್ಷಪ್ಪ ಬಿನ್ ನಿಂಗಪ್ಪ ಚಿಕ್ಕಪಟ್ಟಣಗೆರೆ (ಗ್ರಾ) ಕಸಬಾ(ಹೋ)ಕಡೂರು (ತಾ)	ಕಡೂರು	59	18.09.2021 ನೇಣು	ಒಪ್ಪಿದೆ	5.00
12	ಸಂಜಯ್ ಬಿನ್ ಮರುಳಪ್ಪ, ಎಂ.ಜಕ್ಕನಹಳ್ಳಿ, (ಗ್ರಾ) ಯಗಟಿ(ಹೋ)ಕಡೂರು (ತಾ) ಯುಡಿಆರ್ ನಂ0015 ದಿನಾಂಕ:10.10.2021	ಕಡೂರು	26	10.10.2021 ವಿಷ ಸೇವನೆ	ಒಪ್ಪಿದೆ	5.00

ಸಂ	ರೈತರ ಹೆಸರು ಮತ್ತು ವಿಳಾಸ	ತಾಲ್ಲೂಕು	ವಯಸ್ಸು	ಆತ್ಮಹತ್ಯೆ ಮಾಡಿಕೊಂಡಿರುವ ದಿನಾಂಕ	ಸಮಿತಿಯ ನಿರ್ಣಾಯ/ಶಿಪಾರಸ್ಸು/ ಮಾಡಿದೆ/ತಿರಸ್ಕರಿಸಿದೆ	ಅನುದಾನ (ರೂ.ಲಕ್ಷಗಳಲ್ಲಿ)
13	ತಿಪ್ಪೇಶ ಬಿನ್ ಶೇಖರಪ್ಪ, ಬಿ.ಕೆ. ಹೊಸೂರು (ಗ್ರಾ) ಬೀರೂರು (ಹೋ) ಕಡೂರು (ತಾ) UDR No:0013 ದಿನಾಂಕ:18.07.2021	ಕಡೂರು	33	17.07.2021	ಒಪ್ಪಿದೆ	5.00
14	ಚಂದ್ರುಕಾಂತ್ ಬಿನ್ ಲೋಕೇಶಪ್ಪ ಸಿ. ಎನ್. ಚಿಕ್ಕಬಾಣೂರು (ಗ್ರಾ) ಸಖರಾಯಪಟ್ಟಣ (ಹೋ) ಕಡೂರು (ತಾ) UDR No:0022 ದಿನಾಂಕ:11.08.2021	ಕಡೂರು	21	11.08.2021	ತಿರಸ್ಕರಿಸಿದೆ	
15	ರೇವಣ್ಣ ಬಿನ್ ಕ್ಯಾತೇಗೌಡ, ಎಸ್ ಮಾದಾಪುರ (ಗ್ರಾ) ಸಿಂಗಟಗೆರೆ (ಹೋ) ಕಡೂರು (ತಾ) UDR No:0007 ದಿನಾಂಕ:23.10.2021	ಕಡೂರು	45	22.10.2021	ಒಪ್ಪಿದೆ	5.00
16	ವಾಸುದೇವ ಬಿನ್ ಗೋವಿಂದಪ್ಪ, ದೊಡ್ಡಪಟ್ಟಣಗೆರೆ(ಗ್ರಾ) ಕಸಬಾ (ಹೋ) ಕಡೂರು (ತಾ) UDR No:0006 ದಿನಾಂಕ:30.01.2022	ಕಡೂರು	47	29.01.2022	ಒಪ್ಪಿದೆ	5.00
17	ಪ್ರಸನ್ನ ಬಿನ್ ತಮ್ಮಯ್ಯ, ಅಂಚೆ ಚೋಮನಹಳ್ಳಿ(ಗ್ರಾ) ಸಿಂಗಟಗೆರೆ (ಹೋ) ಕಡೂರು (ತಾ) UDR No:0014 ದಿನಾಂಕ:12.06.2021	ಕಡೂರು	28	11.06.2021	ಒಪ್ಪಿದೆ	5.00
18	ಮಧು ಬಿನ್ ಬಸವರಾಜಪ್ಪ ಸಿಂಗಟಗೆರೆ (ಹೋ),ಕಡೂರು (ತಾ) UDR No:04/2022 ದಿನಾಂಕ: 06.03.2022	ಕಡೂರು	32	04.03.2022	ಒಪ್ಪಿದೆ	5.00
19	ರಾಜೇಶ್/ಪುಟನಾಯ್ಕ, ಅಣ್ಣೇಗೆರೆ (ಗ್ರಾ) ಯಗಟಿ (ಹೋ), ಕಡೂರು (ತಾ) UDR No:05/2022 ದಿನಾಂಕ: 09.03.2022	ಕಡೂರು		09.03.2022	ಒಪ್ಪಿದೆ	5.00
20	ಬಸವರಾಜಪ್ಪ ಬಿನ್ ರಾಮಲಿಂಗಪ್ಪ ಚೆನ್ನಾಪುರ (ಗ್ರಾ) ಕಸಬಾ (ಹೋ), ಕಡೂರು (ತಾ) UDR No:14/2022 ದಿನಾಂಕ: 09.03.2022	ಕಡೂರು	65	09.03.2022 ವಿಷ ಸೇವನೆ	ಒಪ್ಪಿದೆ	5.00
21	ಶ್ರೀ ನರಸಿಂಹಯ್ಯ ಬಿನ್ ಲೇಟ್ ಕದುರಪ್ಪ, ಹೊಗರೇಹಳ್ಳಿ, (ಗ್ರಾ) ಬೀರೂರು (ಹೋ), ಕಡೂರು (ತಾ) UDR No: /2022 ದಿನಾಂಕ:12.11.2021	ಕಡೂರು	65	12-11-2021	ಒಪ್ಪಿದೆ	5.00
